ಮನುಷ್ಯ ಜಾತಿ
ತಾನೊಂದೆ ವಲಂ

ದ್ಯಾವಾ-ಪೃಥಿವೀ

ವಿನಾಯಕ



ಕನ್ನಡ ಸಾಹಿತ್ಯ ಪರಿಷತ್ತು
ಬೆಂಗಳೂರು-೫೬೦೦೧೮

ಕನ್ನಡ ಸಾಹಿತ್ಯ ಪರಿಷತ್ತಿನ ಶತಮಾನೋತ್ಸವ ಮಾಲಿಕೆ ಪ್ರಕಟಣೆ

ದ್ಯಾವಾ–ಪೃಥಿವೀ

ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದ ಕೃತಿ

ವಿನಾಯಕ

ಕನ್ನಡ ಸಾಹಿತ್ಯ ಪರಿಷತ್ತು
ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು – ೫೬೦೦೧೮

Kannada Sahitya Parishattu Centenary Publication

ದ್ಯಾವಾ-ಪೃಥಿವೀ
ವಿನಾಯಕ (ಡಾ. ವಿ.ಕೃ. ಗೋಕಾಕ್)
ಪ್ರಕಾಶಕರು :

ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ
ಚಾಮರಾಜಪೇಟೆ
ಬೆಂಗಳೂರು - ೫೬೦ ೦೧೮

ಮುಖಪುಟ ವಿನ್ಯಾಸ : ಪಿ.ಸಿ. ಕುಮಾರ್

ಪುಟಗಳು : ೮೦

ಮುದ್ರಣ ಕಾಗದ : ೮೦ ಜಿ.ಎಸ್.ಎಂ.
ಎನ್.ಎಸ್.ಮ್ಯಾಪ್‌ಲಿಥೋ

ಬೆಲೆ : ೫೦=೦೦

ಪರಿಷತ್ತಿನಿಂದ ಮುದ್ರಣ : ೨೦೧೫

ಪ್ರತಿಗಳು : ೧೦೦೦

ಮುದ್ರಣ
ಗೀತಾಂಜಲಿ ಗ್ರಾಫಿಕ್ಸ್
ನಂ.ಬಿ-೭೧, ಹೊಸ ನಂ.೮೪
ಕೆ.ಎಸ್.ಐ.ಡಿ.ಸಿ. ಇಂಡಸ್ಟ್ರಿಯಲ್ ಎಸ್ಟೇಟ್
೬ನೇ ಬ್ಲಾಕ್, ರಾಜಾಜಿನಗರ
ಬೆಂಗಳೂರು - ೫೬೦ ೦೧೦.

DYAVA-PRUTHIVI
- a Collection of Poems by Vinayaka
(Dr. V. K. Gokak)
published by :
Kannada Sahitya Parishattu
Pampa Mahakavi Road
Chamarajapete
Bengaluru - 560018

Cover Page : P.S. Kumar

Pages : 80

Paper : 80 G.S.M. N.S. Maplitho

Rs : 50=00

Edition by Parishattu : 2015

Copies : 1000

printed at
Geetanjali Graphics
No.B-71, New No.84
K.S.I.D.C. Industrial Estate
6th Block, Rajajinagar
Bengaluru - 560010.

ಕನ್ನಡ ಸಾಹಿತ್ಯ ಪರಿಷತ್ತಿನ ಶತಮಾನೋತ್ಸವ ಕೃತಿಗಳ ಆಯ್ಕೆ ಸಮಿತಿ

ಅಧ್ಯಕ್ಷರು

ಶ್ರೀ ಪುಂಡಲೀಕ ಹಾಲಂಬಿ

ಸದಸ್ಯರು

ಡಾ. ಸಿದ್ಧಲಿಂಗಯ್ಯ

ಪ್ರೊ. ಜಿ. ಅಶ್ವತ್ಥನಾರಾಯಣ

ಡಾ. ಶ್ಯಾಮಸುಂದರ ಬಿದರಕುಂದಿ

ಡಾ. ತಾರಿಣಿ ಶುಭದಾಯಿನಿ

ಡಾ. ಮಾಧವ ಪೆರಾಜೆ

ಶ್ರೀ ಸಿ.ಕೆ. ರಾಮೇಗೌಡ, ಗೌರವ ಕಾರ್ಯದರ್ಶಿ, ಕ.ಸಾ.ಪ.

ಡಾ. ರಾಜಶೇಖರ ಹತಗುಂದಿ, ಗೌರವ ಕಾರ್ಯದರ್ಶಿ, ಕ.ಸಾ.ಪ.

ಶ್ರೀ ಪಿ. ಮಲ್ಲಿಕಾರ್ಜುನಪ್ಪ, ಗೌರವ ಕೋಶಾಧ್ಯಕ್ಷ, ಕ.ಸಾ.ಪ.

ಪ್ರಕಟಣಾ ಸಮಿತಿ ಸಂಚಾಲಕ

ಶ್ರೀ ಜೆ.ಎನ್. ಶಾಮರಾವ್

ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು
ಕಾರ್ಯಕಾರಿ ಸಮಿತಿ

ಶ್ರೀ ಪುಂಡಲೀಕ ಹಾಲಂಬಿ., ಅಧ್ಯಕ್ಷರು

ಶ್ರೀ ಸಿ.ಕೆ. ರಾಮೇಗೌಡ, ಗೌರವ ಕಾರ್ಯದರ್ಶಿ

ಡಾ. ರಾಜಶೇಖರ ಹತಗುಂದಿ, ಗೌರವ ಕಾರ್ಯದರ್ಶಿ

ಶ್ರೀ ಪಿ. ಮಲ್ಲಿಕಾರ್ಜುನಪ್ಪ, ಗೌರವ ಕೋಶಾಧ್ಯಕ್ಷ

ಶ್ರೀ ಟಿ. ತಿಮ್ಮೇಶ್, ಬೆಂಗಳೂರು ನಗರ

ಶ್ರೀ ಹುಲಿಕಲ್ ನಟರಾಜ್, ಬೆಂ. ಗ್ರಾಮಾಂತರ

ಶ್ರೀ ಬಿ.ಟಿ. ನಾಗೇಶ್, ರಾಮನಗರ

ಶ್ರೀ ಜೆ.ಜಿ. ನಾಗರಾಜ, ಕೋಲಾರ

ಶ್ರೀ ವೈ.ಎಲ್. ಹನುಮಂತರಾವ್, ಚಿಕ್ಕಬಳ್ಳಾಪುರ

ಡಾ. ಸೋ.ಮು. ಭಾಸ್ಕರಾಚಾರ್ಯ, ತುಮಕೂರು

ಶ್ರೀ ಆರ್. ಮಲ್ಲಿಕಾರ್ಜುನಯ್ಯ, ಚಿತ್ರದುರ್ಗ

ಶ್ರೀ ಎ.ಆರ್. ಉಜ್ಜನಪ್ಪ ದಾವಣಗೆರೆ

ಶ್ರೀ ಡಿ.ಮಂಜುನಾಥ್, ಶಿವಮೊಗ್ಗ

ಡಾ. ಎಂ. ಚಂದ್ರಶೇಖರ್, ಮೈಸೂರು

ಶ್ರೀ ಸೋಮಶೇಖರ ಬಿಸಲ್ವಾಡಿ, ಚಾಮರಾಜನಗರ

ಶ್ರೀಮತಿ ಮೀರಾ ಶಿವಲಿಂಗಯ್ಯ, ಮಂಡ್ಯ

ಡಾ. ಎಚ್.ಎಲ್. ಜನಾರ್ಧನ, ಹಾಸನ

ಶ್ರೀ ಟಿ.ಪಿ.ರಮೇಶ್, ಕೊಡಗು

ಶ್ರೀ ಎನ್.ಎಸ್. ಶಿವಸ್ವಾಮಿ, ಚಿಕ್ಕಮಗಳೂರು

ಶ್ರೀ ನೀಲಾವರ ಸುರೇಂದ್ರ ಅಡಿಗ, ಉಡುಪಿ

ಶ್ರೀ ಎಸ್.ಪ್ರದೀಪಕುಮಾರ ಕಲ್ಕೂರ, ದಕ್ಷಿಣ ಕನ್ನಡ

ಶ್ರೀ ಯ.ರು. ಪಾಟೀಲ, ಬೆಳಗಾವಿ

ಶ್ರೀ ಮಲ್ಲಿಕಾರ್ಜುನ ಅಯ್ಯಪ್ಪ ಯಂಡಿಗೇರಿ, ವಿಜಾಪುರ

ಡಾ. ವಿಜಯಕುಮಾರ ಕಟಗಿಹಳ್ಳಿಮಠ, ಬಾಗಲಕೋಟೆ

ಡಾ. ಲಿಂಗರಾಜ ರು. ಅಂಗಡಿ, ಧಾರವಾಡ

ಶ್ರೀ ಗುರುಶಾಂತಪ್ಪ ಬಿ. ಮಾಸಣಗಿ, ಹಾವೇರಿ

ಡಾ. ಶಿವಪ್ಪ ಮರಿಬಸಪ್ಪ ಕುರಿ, ಗದಗ

ಶ್ರೀ ರೋಹಿದಾಸ ನಾಯಕ, ಉತ್ತರ ಕನ್ನಡ

ಶ್ರೀ ಮಹಿಪಾಲರೆಡ್ಡಿ ಮುನ್ನೂರ, ಗುಲ್ಬರ್ಗ

ಶ್ರೀ ಸಿದ್ದಪ್ಪ ಎಸ್. ಹೊಟ್ಟಿ, ಯಾದಗಿರಿ

ಪ್ರೊ. ಸಿದ್ರಾಮಪ್ಪ ಮಾಸಿಮಾಡೆ, ಬೀದರ್

ಶ್ರೀ ಮಹಾಂತೇಶ ಮಸ್ಕಿ, ರಾಯಚೂರು

ಶ್ರೀ ವೀರಪ್ಪ ಮ. ನಿಂಗೋಜಿ, ಕೊಪ್ಪಳ

ಶ್ರೀ ಸಿರಿಗೇರಿ ಯರ್‍ರಿಸ್ವಾಮಿ, ಬಳ್ಳಾರಿ

ಶ್ರೀ ಎಚ್.ಬಿ.ಎಲ್.ರಾವ್, ಮಹಾರಾಷ್ಟ್ರ

ಶ್ರೀ ಎಚ್.ಬಿ. ಶಿವಕುಮಾರ್, ಆಂಧ್ರ ಪ್ರದೇಶ

ಶ್ರೀ ಕೆ.ಪಿ.ಆಚಾರ್ಯ, ತಮಿಳುನಾಡು

ಶ್ರೀ ಸುಬ್ರಹ್ಮಣ್ಯ ವಿ.ಭಟ್, ಕೇರಳ

ಡಾ. ಸಿದ್ಧಲಿಂಗಯ್ಯ
೮೧ನೇ ಅ.ಭಾ.ಕ.ಸಾ. ಸಮ್ಮೇಳನಾಧ್ಯಕ್ಷರು

ಡಾ. ನಲ್ಲೂರು ಪ್ರಸಾದ್ ಆರ್.ಕೆ.
ನಿಕಟಪೂರ್ವ ಅಧ್ಯಕ್ಷರು

ಡಾ. ವಿಜಯದೇವಿ ಎಸ್.ಎಸ್.
ಮಹಿಳಾ ವಿ.ವಿ. ಪ್ರತಿನಿಧಿ

ಡಾ. ತಂಬಂಡ ವಿಜಯ್ ಪೂಣಚ್ಚ
ಕನ್ನಡ ವಿ.ವಿ.ಪ್ರತಿನಿಧಿ

ಶ್ರೀ ಕೆ.ಎ. ದಯಾನಂದ
ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಶ್ರೀಮತಿ ಬಿ.ಟಿ. ಲಲಿತಾ ನಾಯಕ್
ಮಹಿಳಾ ಪ್ರತಿನಿಧಿ

ಡಾ. ಕಾ.ವೆಂ. ಶ್ರೀನಿವಾಸಮೂರ್ತಿ
ಪರಿಶಿಷ್ಟ ಜಾತಿ ಪ್ರತಿನಿಧಿ

ಶ್ರೀ ಬಿ.ಎಚ್. ಸತೀಶ್‌ಗೌಡ
ಸಂಘಸಂಸ್ಥೆಗಳ ಪ್ರತಿನಿಧಿ

ಅಧ್ಯಕ್ಷರ ಮಾತು

ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆಯಾದ ಕನ್ನಡ ಸಾಹಿತ್ಯ ಪರಿಷತ್ತು ಶತಮಾನೋತ್ಸವವನ್ನು ಆಚರಿಸಿಕೊಳ್ಳುತ್ತಿರುವುದು ಹೆಮ್ಮೆಯ ವಿಷಯ. ನಾಡು, ನುಡಿ, ಸಾಹಿತ್ಯಕ್ಕೆ ಪ್ರೇರಕಶಕ್ತಿಯಾಗಿ ಹಾಗೂ ಪೋಷಕವಾಗಿ ದುಡಿಯುತ್ತಿರುವ ಕನ್ನಡ ಸಾಹಿತ್ಯ ಪರಿಷತ್ತು ೫-೫-೧೯೧೫ರಂದು ಅಂದಿನ ಮೈಸೂರು ಮಹಾರಾಜರಾದ ನಾಲ್ವಡಿ ಕೃಷ್ಣರಾಜ ಒಡೆಯರು ಹಾಗೂ ದಿವಾನ್‌ರಾಗಿದ್ದ ಸರ್.ಎಂ. ವಿಶ್ವೇಶ್ವರಯ್ಯನವರ ಪ್ರಯತ್ನದ ಫಲವಾಗಿ ಸಂಸ್ಥಾಪನೆಗೊಂಡಿತು. ಈವರೆಗೆ ೨೪ ಜನ ಅಧ್ಯಕ್ಷರು ಪರಿಷತ್ತಿನ ಸೇವೆ ಸಲ್ಲಿಸಿದ್ದಾರೆ. ೮೧ ಅಖಿಲ ಭಾರತ ಸಾಹಿತ್ಯ ಸಮ್ಮೇಳನಗಳ ಅಧ್ಯಕ್ಷತೆಯನ್ನು ೭೯ ಜನ ಮಹಾನ್ ಲೇಖಕರು ಅಲಂಕರಿಸಿದ್ದಾರೆ. ೮೩ ಜನ ಸದಸ್ಯರಿಂದ ಆರಂಭಗೊಂಡ ಪರಿಷತ್ತಿನ ಇಂದಿನ ಸದಸ್ಯರ ಸಂಖ್ಯೆ ೨,೦೮,೦೦೦. ಪರಿಷತ್ತಿನ ಪ್ರಕಟಣೆಗಳ ಸಂಖ್ಯೆ ೧೪೭೪. ಕೇವಲ ಅಂಕಿಸಂಖ್ಯೆಯ ದೃಷ್ಟಿಯಿಂದಲೇ ಕನ್ನಡ ಸಾಹಿತ್ಯ ಪರಿಷತ್ತಿನ ಸಾಧನೆ ಅನನ್ಯವಾದುದು; ಇನ್ನು ಕನ್ನಡ ಸಾರಸ್ವತ ಲೋಕಕ್ಕೆ ನೀಡಿದ ಕೊಡುಗೆಯಂತೂ ಅವಿಸ್ಮರಣೀಯವಾದುದು.

ಈ ಹಿನ್ನೆಲೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಶತಮಾನೋತ್ಸವದ ಅಂಗವಾಗಿ ಕೆಲವೊಂದು ಮಹತ್ವದ ಯೋಜನೆಗಳನ್ನು ಪರಿಷತ್ತು ಕೈಗೊಂಡಿರುತ್ತದೆ. ಮೊದಲನೆಯದಾಗಿ, ಎರಡು ಶತಮಾನಗಳಿಗೂ ಮೀರಿದ ಅವಧಿಯ ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಗಳ ರಚನೆ ಹಾಗೂ ಪ್ರಕಟಣೆ. ಈ ೧೭ ಸಂಪುಟಗಳ ರಚನೆಯ ಕಾರ್ಯದಲ್ಲಿ ಈಗಾಗಲೇ ಪರಿಣತ ಸಂಪಾದಕರು ಹಾಗೂ ನೂರಾರು ಲೇಖಕರು ಕ್ರಿಯಾಶೀಲರಾಗಿದ್ದು, ಒಂದು ಸಂಪುಟವು ಬಿಡುಗಡೆಯಾಗಿದೆ. ಎರಡನೆಯದಾಗಿ, ಪರಿಷತ್ತಿನ ನೂರರ ಸಂಭ್ರಮಕ್ಕೆ ಕಿರೀಟಪ್ರಾಯವಾಗಿ ಕನ್ನಡದ ನೂರು ಮೌಲಿಕ ಗ್ರಂಥಗಳ ಮುದ್ರಣ. ಜೊತೆಗೆ, ಪರಿಷತ್ತಿನ ನೂರು ವರ್ಷಗಳ ಇತಿಹಾಸವನ್ನು ದಾಖಲಿಸುವ ನೆನಪಿನ ಸಂಪುಟದ ಪ್ರಕಟಣೆ.

'ಕನ್ನಡ ಸಾಹಿತ್ಯ ಪರಿಷತ್ತು ಶತಮಾನ : ಕೃತಿ ನೂರು" ಎಂಬ ಯೋಜನೆಯಡಿ ಪುಸ್ತಕಗಳ ಆಯ್ಕೆಗೆ ಪರಿಣತರ ಸಮಿತಿಯನ್ನು ರಚಿಸಲಾಯಿತು. ಈ ಆಯ್ಕೆ ಸಮಿತಿಯು ನೂರು ಪುಸ್ತಕಗಳನ್ನು ಆಯ್ಕೆಮಾಡಿ ಕೊಟ್ಟಿರುತ್ತದೆ. ಕನ್ನಡ ಸಾಹಿತ್ಯದ ವಿವಿಧ ಘಟ್ಟಗಳು, ಚಳುವಳಿಗಳು ಹಾಗೂ ವಿವಿಧ ಸಾಹಿತ್ಯಿಕ ಸಂವೇದನೆ ಹಾಗೂ ಅನುಭವ ದ್ರವ್ಯಗಳನ್ನು ಆಯ್ಕೆ ಸಮಿತಿಯು ಗಮನದಲ್ಲಿರಿಸಿಕೊಂಡು ನೂರು

ಪುಸ್ತಕಗಳನ್ನು ಆಯ್ಕೆ ಮಾಡಿರುತ್ತದೆ. ಇದರಲ್ಲಿ ಸಾಹಿತ್ಯದ ಎಲ್ಲ ಪ್ರಕಾರಗಳಿಗೂ ಪ್ರಾತಿನಿಧ್ಯವಿರುವಂತೆ ಸಹ ನೋಡಿಕೊಳ್ಳಲಾಗಿದೆ. ಪ್ರತಿಭೆ, ಪ್ರಾದೇಶಿಕತೆ ಹಾಗೂ ಸಾಮಾಜಿಕ ನ್ಯಾಯಗಳನ್ನು ಪರಿಗಣಿಸಲಾಗಿದೆ. ಈಗಾಗಲೇ ಸಮಗ್ರವಾಗಿ ಲಭ್ಯವಿರುವ ಹಾಗೂ ಮತ್ತೆ ಮತ್ತೆ ಪುನರ್‌ಮುದ್ರಿತವಾಗಿರುವ ಕೃತಿಗಳಿಗೆ ಆದ್ಯತೆ ನೀಡಿಲ್ಲವಾಗಿದ್ದರೂ, ಒಟ್ಟಾರೆ ಕನ್ನಡ ಸಾಹಿತ್ಯಕ್ಕೆ ಮಹತ್ವದ ಕೊಡುಗೆ ನೀಡಿರುವ ಲೇಖಕರನ್ನು ಬಹುಮಟ್ಟಿಗೆ ಉಳಿಸಿಕೊಳ್ಳಲಾಗಿದೆ. ಇಂಥ ಮಹತ್ವದ ಪುಸ್ತಕಗಳ ಪಟ್ಟಿಯನ್ನು ಸಿದ್ಧಪಡಿಸಿಕೊಟ್ಟ ಆಯ್ಕೆ ಸಮಿತಿ ಸದಸ್ಯರಾದ ಡಾ. ಸಿದ್ಧಲಿಂಗಯ್ಯ, ಪ್ರೊ. ಜಿ. ಅಶ್ವತ್ಥನಾರಾಯಣ, ಡಾ. ಶ್ಯಾಮಸುಂದರ ಬಿದರಕುಂದಿ, ಡಾ. ರಾಜಶೇಖರ ಹತಗುಂದಿ, ಡಾ. ತಾರಿಣಿ ಶುಭದಾಯಿನಿ ಹಾಗೂ ಡಾ. ಮಾಧವ ಪೆರಾಜೆ ಅವರಿಗೆ ನನ್ನ ಕೃತಜ್ಞತೆಗಳು.

ಈ ನೂರು ಕೃತಿಗಳನ್ನು ಏಕ ಚೌಕಟ್ಟಿನಲ್ಲಿ, ಆದರೆ ವಿವಿಧ ಕಲಾವಿನ್ಯಾಸಗಳಲ್ಲಿ ಮುದ್ರಿಸಲು ಸಹ ಯೋಜಿಸಲಾಗಿದೆ. ಸಾಧ್ಯವಾದ ಮಟ್ಟಿಗೂ ಒಟ್ಟಾರೆ ಗುಣಮಟ್ಟದಲ್ಲಿ ಏಕರೂಪತೆಯನ್ನು ಉಳಿಸಿಕೊಳ್ಳಲು ಪ್ರಯತ್ನಿಸಲಾಗಿದೆ.

ಪರಿಷತ್ತಿನ ಯೋಜನೆಯಡಿ ಡಾ. ವಿ.ಕೃ. ಗೋಕಾಕ್ ಅವರ ಕೃತಿಯನ್ನು ಪುನರ್‌ಮುದ್ರಿಸಲು ಅನುಮತಿಯನ್ನು ಕೋರಿದಾಗ, ಪರಿಷತ್ತಿನ ಮೇಲಿನ ಗೌರವದಿಂದಾಗಿ ಪ್ರೊ. ಅನಿಲ ಗೋಕಾಕ ಅವರು ತಮ್ಮ ಒಪ್ಪಿಗೆಯನ್ನು ನೀಡಿ ಹೃತ್ಪೂರ್ವಕವಾಗಿ ಸಹಕರಿಸಿದ್ದಾರೆ. ಅವರಿಗೆ ನನ್ನ ಗೌರವಪೂರ್ವಕ ಕೃತಜ್ಞತೆಗಳು.

ಈ ಯೋಜನೆಯಡಿ ಈಗಾಗಲೇ ೫೦ ಪುಸ್ತಕಗಳನ್ನು ಹೊರತರಲಾಗಿದೆ. ಎರಡನೆಯ ಕಂತಿನ ಪುಸ್ತಕಗಳು ಇದೀಗ ಪ್ರಕಟವಾಗುತ್ತಿವೆ.

ಎರಡನೆಯ ಕಂತಿನ ಈ ಪುಸ್ತಕಗಳನ್ನು ಅಂದವಾಗಿ ಮುದ್ರಿಸಿಕೊಟ್ಟ ಮೆ॥ ಗೀತಾಂಜಲಿ ಗ್ರಾಫಿಕ್ಸ್ ಅವರಿಗೆ ನನ್ನ ಕೃತಜ್ಞತೆಗಳು.

ದಿನಾಂಕ : ೦೫–೦೮–೨೦೧೫
ಬೆಂಗಳೂರು

ಪುಂಡಲೀಕ ಹಾಲಂಬಿ
ಅಧ್ಯಕ್ಷರು

ಮುನ್ನುಡಿ

'ದ್ಯಾವಾ ಪೃಥಿವೀ' ಎಂಬ ಕವನ ವಿನಾಯಕರ ನವೀನ ಕೃತಿ ಒಮ್ಮೆ ತ್ರಿವಿಕ್ರಮನಾಗಿ ಆಕಾಶಗಂಗೆಯಲ್ಲಿ ಹರಿದಾಡಿದ ಅವರ ಮನಸ್ಸು, ಈಗ ನೆಲ–ಬಾನುಗಳನ್ನು ತನ್ನ ದೃಷ್ಟಿಕೋನದಲ್ಲಿ ಒಳಗೊಳ್ಳಬೇಕು ಎಂದು ಹವಣಿಸುತ್ತಿದೆ. ಕವಿಮನದ ರೀತಿಯೇ ಹೀಗೆ– ಎಂದು ಶೆಕ್ಸಪಿಯರ್ ಸೂಚಿಸಿದ್ದಾನೆ. ಕವಿಮನದ ಸ್ಥಿತಿಬಿಂದು ಪೃಥ್ವಿಯಾದರೆ, ಅದರ ವ್ಯಾಪ್ತಿಯ ಪರಿಘ ಆಕಾಶವಾಗುತ್ತದೆ. ಈ ಆಕಾಶದಲ್ಲಿ ಪ್ರಕಾಶವು ಗಂಗೆಯಾಗಿ ಹರಿದು, ನಕ್ಷತ್ರಗಳು ಪುಂಜಪುಂಜಗಳಾಗಿ ವಿವಿಧ ಆಕೃತಿಗಳನ್ನು ಸೂಚಿಸಿದಾಗ, ಚಿತ್ತದ ಕಲ್ಪಕತೆಗೆ ಚಿಗುರು ಒಡೆಯುತ್ತದೆ. ಈ ಚಿತ್ರಣಶಕ್ತಿಯ ನಿರ್ವಾಹದಲ್ಲಿ, ಅದು ಅಭ್ಯಸ್ಥನಂತೆ ಸಂಚಾರ ಮಾಡಲು ತೊಡಗಿದ ಮೇಲೆ ಈ ಕಲ್ಪನಾಚಿತ್ರಗಳು ತಮ್ಮ ವೈವಿಧ್ಯದಿಂದ ಒಡೆದು ಚಲ್ಲಾಪಿಲ್ಲಿಯಾಗದೆ, ಒಂದು ಪಿಂಡವನ್ನು ಪಡೆದಂತೆ ರೂಪಗೊಳ್ಳುತ್ತವೆ. ಇಂಥ ರೂಪಕ ಸಾಕ್ಷಾತ್ಕಾರದಿಂದ ಚಿತ್ತವೃತ್ತಿಯ ಅಲ್ಪತೆ ಇಲ್ಲದಾಗಿ, ಚಿತ್ತಕ್ಕೆ ಮಹಾವ್ಯಾಪಕತೆ ಬಂದು, ಅಭೂತಪೂರ್ವ ಸಂಗತಿಗಳ ಸ್ಫುರಣವಾಗುತ್ತದೆ. ಯಾವುದೋ ಅದೃಷ್ಟವು ಗೋಚರವಾಗುತ್ತದೆ. ಸದ್ಯದ ಕವನದಲ್ಲಿ ಕವಿಯ ಪ್ರತಿಮಾದೃಷ್ಟಿ ಮತ್ತು ಪ್ರತಿಮಾ ಸೃಷ್ಟಿಯು ಒಂದನ್ನೊಂದು ಕವಳಿಸಿ ಪರಸ್ಪರಿಗೆ ಪೂರಕವಾಗಿ ಒಂದು ಪೂರ್ಣತೆಯ ಕಳೆಯನ್ನು ತಂದಿವೆ.

ಈ ಕಾವ್ಯದ ಪೂರ್ವಭಾಗ 'ನೀರದ'; ಉತ್ತರಭಾಗ 'ಇಳಾಗೀತ'; ವಿನಾಯಕರ ಕಲ್ಪನೆಯ ವೈಚಿತ್ರ್ಯವು ಶೆಲ್ಲಿ ಕವಿಯ ಜಾತಿಯದು. ಅವರ ವಿದ್ಯಾರ್ಥಿದಶೆಯಲ್ಲಿ ಆ ಕವಿಯ ಕಾವ್ಯದ ಅಭ್ಯಾಸದಿಂದ, ಅವನ ಬಗ್ಗೆ ಉಂಟಾದ ಆತ್ಮೀಯತೆಯಿಂದ, ಅವರ ಚಿತ್ತ ಲಹರಿ, ಆ ಕಲ್ಪಕತೆಗೆ ಮಾರುಹೋಯಿತು; ಅದನ್ನು ತನ್ನ ಮೈಗೂಡಿಸಿಕೊಂಡಿತು. ಮೇಘಮಾಲೆಯನ್ನು ನೋಡಿದಾಗ, ಶೆಲ್ಲಿಗೆ ಬಂದ ಕಾವ್ಯಸ್ಫೂರ್ತಿ ಒಂದು ಬಗೆಯದು. ಕಾಲಿದಾಸ ಅದನ್ನು ನಿಮಿತ್ತವಾಗಿ ಬಳಸಿಕೊಂಡ ರೀತಿ ಇನ್ನೊಂದು ಬಗೆಯದು. ಜೈನಕವಿಗಳು ತಮ್ಮ ಪುರಾಣಗಳೊಳಗಿನ ಕೆಲ ಚಾರಿತ್ರಿಕ ಪುರುಷರಿಗೆ ಮೇಘದರ್ಶನದಿಂದ ಉದ್ದೀಪ್ತವಾದ ವೈರಾಗ್ಯದ ವರ್ಣನೆಯನ್ನೂ ಮಾಡಿದ್ದಾರೆ, ಅದರ ಬಗೆ ಮತ್ತೊಂದು. ವಿನಾಯಕರ 'ನೀರದ' ಬಹುರೂಪಿಯಾಗಿ, ಚಿತ್ತರಂಜನೆ ಮಾಡುವನಲ್ಲದೇ ನಾರದನಂತೆ ದಿವ್ಯ ಸಂದೇಶದ ಧ್ವನಿಯನ್ನೂ ಬಿತ್ತರಿಸುತ್ತಾನೆ. ಕಲ್ಪನೆಯ ದಾಂಗುಡಿ ಇಲ್ಲಿಯೇ ವಿರಮಿಸುವುದಿಲ್ಲ. ಚಿತ್ರಪಟದಂತೆ ಅಪೂರ್ವವಾದ ಒಂದು ಪುರಾಣಕಥಾ ವಿರಚನೆಯನ್ನೇ ಅದು ಅವರ ಕಣ್ಣೆದುರು ಕಟ್ಟಿದಂತೆ ಮಾಡುತ್ತದೆ. ಈ ಕಥೋತ್ಪತ್ತಿಗೂ ಅವರ ಅಂತರ್‌ಮನದಲ್ಲಿ ಅಡಗಿದ ಶೆಲ್ಲಿಕವಿಯ ಯಾವುದೋ ವಿಚಾರ–ಬೀಜವೂ, ರೂಪಕ ಬೀಜವೂ ಕಾರಣವಾಗಿರಲೂಬಹುದು. ವ್ಯುತ್ಪನ್ನನಾದ ಕವಿಯಲ್ಲಿ ಹತ್ತು ಹೂವಿನ

ಸುಗಂಧ ನರುಗಂಪು ಬೀರುವುದು. 'ನೀರದ'ದೊಳಗಿನ ಈಕ್ಷ್ವಾಯಣವು ರಾಮಾಯಣದಂತೆ ವಿಸ್ತಾರವಾಗಿರದಿದ್ದರೂ ಮಾನವೀಯ ಮನದ ಬಂಧ-ಮೋಕ್ಷದ ಸಮಸ್ಯೆಯನ್ನೇ ಸೂಚಿಸುತ್ತದೆ. ನೀರದ-ದರ್ಶನಕ್ಕಾಗಿ ಕವಿಮನವು ಉನ್ನತಮುಖಿವಾಗಿದ್ದರೂ, ಆ ಬಯಲೊಳಗಿನ ಚಿತ್ರಪಟವು ನೆಲದ ಮೇಲಿನ ಸಮಸ್ಯೆಗೇ ಕನ್ನಡಿ ಹಿಡಿದಂತೆ. ಈ ಕಾವ್ಯದೊಳಗಿನ ಭವ್ಯರೂಪಕವು, ಪ್ರತಿಮಾಪ್ರಪಂಚವು, ತನ್ನ ವಿಲಾಸ ವೈಚಿತ್ರ್ಯದಿಂದ ಭಾವೋದ್ದೀಪನ ಸಮರ್ಥವಾಗಿದೆ. ಇಲ್ಲಿಯ ಕಾವ್ಯರಸಾಯನದಲ್ಲಿ ಕವಿಗಿರುವ ತತ್ತ್ವಸ್ಪರ್ಶ, ನಂಬುಗೆಯ ಬೆಂಬಲ ಇವೆರಡೂ ಕಾವ್ಯೋಕ್ತಿಗೆ ಹೊಳಪು ಕೊಟ್ಟರೂ ನಾವು ಇಲ್ಲಿಯ ಕಲ್ಪನಾಧಾರೆಯ ಸಹಾಯದಿಂದಲೇ ಭಾವದ ಬೆನ್ನೇರಿ ಕವಿ ತೆರೆದ ಲೋಕಗಳಲ್ಲಿ ಸಂಚರಿಸಬೇಕಾಗಿದೆ. ಈ ಕುಶಲಕರ್ಮ ಮಾಡಿಸುವಲ್ಲಿ ಕಾವ್ಯಯುಕ್ತಿ ಅರ್ಧ ಕೆಲಸ ಮಾಡಿದರೆ, ಉಳಿದರ್ಧವನ್ನು ರಸಿಕರು ಮಾಡಬೇಕಾಗುತ್ತದೆ. ನಾವು ಅರ್ಥ-ಅನರ್ಥ ಸಂಶಯಗಳಿಂದ ಕಾಲ್ತೊಡಕು ಮಾಡಿಕೊಂಡರೆ ನಮ್ಮ ಆಕಲನದ ಗತಿಯೇ ಕುಂಠಿತವಾಗುತ್ತದೆ. ಸಹೃದಯರಾದ ವಾಚಕರು ಶಿಕ್ಷಣಸಂಸ್ಕಾರದಿಂದ ಇಂಥ ಶಕ್ತಿಯನ್ನು ಪಡೆದಿರುತ್ತಾರೆ, ಇಲ್ಲವೇ ಪಡೆಯಬೇಕಾಗುತ್ತದೆ.

'ನೀರದ'ವು ನೆಲದ ಮೇಲೆ ನಿಂತು ಆಕಾಶದತ್ತ ಎಸೆದ ನೋಟವಾದರೆ; 'ಇಳಾಗೀತ'ವು ಬಾನತ್ತಣಿಂದ ನೆಲದತ್ತ ಬೀರಿದ ನೋಟ ಎಂದು ಹೇಳಬಹುದು. ಚತುರರೊಬ್ಬರು 'ಮಳಿಯು ಇಳಿಬೇಕೆನ್ನುತ್ತದೆ; ಇಳೆಯು ಮಳಿ ಬೇಕೆನ್ನುತ್ತದೆ'-ಎಂದರಂತೆ, ಅಡ್ಡ ಮಳೆಯ ಮೋಡಗಳು ಬಿಸಿಲುಗಾಲದ ಒಂದು ಸಾಯಂಕಾಲ ಆಕಾಶ ತುಂಬಿ ನಿಂತಾಗ. ಈ ಕಾವ್ಯದಲ್ಲಿಯೂ 'ಇಳಿ' (ಇಳಾ) ಮತ್ತು 'ಮಳಿ' (ಮಳೆ) ಅಂದರೆ ನೆಲ ಮತ್ತು ನೀರು ಪರಸ್ಪರರಿಗೆ ಪೋಷಕ ಸಾಮಗ್ರಿ ಆಗಿವೆ. ನೆಲದ ಮೇಲೆ ನಿಂತು ಚಿತ್ರ-ವಿಚಿತ್ರವಾದ ಮೋಡಗಳ ರೂಪ ಮತ್ತು ವರ್ಣಗಳ ವೈಖರಿಯನ್ನು ನೋಡುವದು ಎಷ್ಟು ಅಂದವೋ ಅಷ್ಟೇ ಅಂದ ವಿಮಾನದಲ್ಲಿ ಕುಳಿತು ಭೂಮಿತಳದತ್ತ ಕಟಾಕ್ಷವಿಕ್ಷೇಪ ಮಾಡುವದು ಆಗಿದೆ. 'ನೀರದ'ವು ನಮ್ಮ ಉದ್ಧಾರದ ಅಭೀಪ್ಸೆಯನ್ನು ವ್ಯಕ್ತಗೊಳಿಸಿದರೆ 'ಇಳಾಗೀತ'ವು ಒಂದು ಅವತಾರದ ಸೂಚನೆಯನ್ನು ಮಾಡುವುದು. 'ಇಳಾಗೀತ'ದಲ್ಲಿ ಕವಿಯು ದಶಾವತಾರಗಳ ಕಲ್ಪನೆಯನ್ನು ಬಹಳ ವ್ಯಂಜಕವಾಗಿ ಉಪಯೋಗಿಸಿದ್ದಾರೆ. ಇಲ್ಲಿಯೂ ನಾವು ಯಾವುದೋ ಐತಿಹಾಸಿಕ ವಾಸ್ತವಿಕತೆಯಿಂದ ತೊಂದರೆಗೀಡಾಗುವುದು ಅನವಶ್ಯಕ. ಕವಿಕೌಶಲವು ಅದನ್ನು ಹೇಗೆ ಬಳಸಿಕೊಂಡಿದೆ? ಇದೇ ಮುಖ್ಯ. 'ನೀರದ' ಕಾವ್ಯಖಂಡ ಬರೆಯುವಾಗ 'ಇಳಾಗೀತ' ಕವಿಮನದಲ್ಲಿ ಇಣಿಕಿರಲಿಲ್ಲ. 'ಇಳಾಗೀತ'ವು 'ನೀರದ'ವನ್ನು ಪೂರ್ವಭಾವಿಯಾಗಿಟ್ಟುಕೊಂಡಿದ್ದರೂ ತನ್ನಷ್ಟಕ್ಕೆ ಆದ ಅದರ ಪೂರ್ಣತೆ ಅದಕ್ಕಿದೆ. ಆದರೂ 'ನೀರದ'ಕ್ಕೂ 'ಇಳಾಗೀತ'ಕ್ಕೂ ತಾತ್ತ್ವಿಕ ನಂಬುಗೆಯ ಬೆನ್ನುಹುರಿಯಾಗಿ ಶ್ರೀ ಅರವಿಂದರ ಯೋಗ ದರ್ಶನವೂ ನಿಂತಿದೆ. ಈ ದರ್ಶನವು ಕನ್ನಡ ಕಾವ್ಯದ ಪರಿಣತಿಗೂ ಹೊಸತಲ್ಲ, ಹೊರತಲ್ಲ.

ಈ ಕಾವ್ಯದ ಕೊನೆಗೆ 'ಅಭ್ಯಾಸಿ'ಯ ಟಿಪ್ಪಣಿಗಳಿರುವುದರಿಂದ ಮುನ್ನುಡಿಯ ಕಾರ್ಯ ಹಗುರಾಗಿದೆ. ಕಾವ್ಯದ ಆಕಲನೆಗೆ ಆ ಟಿಪ್ಪಣಿಗಳನ್ನೋದುವದು ಅನುಕೂಲವೆನಿಸೀತು. ಚುರುಕುಬುದ್ಧಿಯ ಚತುರರಿಗೆ ಅದು ಬೇಕಾಗಲಿಕ್ಕೂ ಇಲ್ಲ. ಅದರ ಓದು ತೊಡಕೂ ಎನಿಸೀತು. ಕಾವ್ಯಾಸ್ವಾದನದ ರೀತಿಗಳು ಬಹುಮುಖವಾಗಿವೆ. ಕೆಲವರಿಗೆ ಈ ಮುನ್ನುಡಿಯೂ ಆಗಂತುಕ ಎನಿಸೀತು. ಆದರೆ ಭಿನ್ನರುಚಿ ಮತ್ತು ಸಾಮರ್ಥ್ಯಭೇದ ಇವುಗಳನ್ನನುಲಕ್ಷಿಸಿಯೂ ಇಂದಿನ ಕಾವ್ಯ ಪ್ರಕಾಶನ ವ್ಯವಸಾಯ ಸಾಗಬೇಕಾಗುತ್ತದೆ. 'ಅಭ್ಯುದಯ', 'ನವ್ಯಕವಿತೆ', 'ಸಮುದ್ರಗೀತ', 'ಬಾಳದೇಗುಲ' ಇತ್ಯಾದಿ ಕಾವ್ಯಗಳಲ್ಲಿ ವಿನಾಯಕರ ಪ್ರತಿಭೆಯನ್ನು ಕಂಡವರು ಈ ನವೀನ ಕಾವ್ಯಾಲಂಕಾರದಿಂದಲೂ ಮೆಚ್ಚಿಕೊಳ್ಳುವರು ಎಂದು ನಾನು ನಂಬಿದ್ದೇನೆ. ಕನ್ನಡ ಕಾವ್ಯ ಇಲ್ಲಿ ತನ್ನ ಕೆಚ್ಚನ್ನೂ, ಹೊಗರನ್ನೂ ವೃದ್ಧಿಪಡಿಸಿಕೊಂಡಿದೆ ಎಂಬುದಕ್ಕೆ ಇಂಥ ಕಾವ್ಯಗಳೇ ಸಾಕ್ಷಿ. ಅಂಥ ಕೆಚ್ಚು, ಆ ಹೊಗರು ವಾಚಕರಲ್ಲಿಯೂ ಒಂದು ಬಗೆಯಿಂದ ತಲೆದೋರಬೇಕು. ಅದಕ್ಕಾಗಿ ವಿಮರ್ಶೆಯು ಕೃಷಿ ಮಾಡಬೇಕು. ಅದು ಕಾಲಕ್ರಮದಲ್ಲಿ ಆಗಬೇಕಾದ ಕೆಲಸ.

ಮೇ ೬, ೧೯೫೭ — ದ.ರಾ. ಬೇಂದ್ರೆ

ಸಾಧನಕೇರಿ

ದ್ಯಾವಾ–ಪೃಥಿವೀ

ನೀರದ

೧

ಮೋಡ.
ನೀಲಿಮದಾಳದಿ ತೇಲುವ ಓಡ
ಇದರ ಚೆಲುವ ನೋಡ!

ಮಳೆಗೆ ಬಾಯ್ದೆರೆದು ಬಿರಿತು ನಿಂತ ನೆಲ :
ಇಂತದೊಂದು ಪಾಂಗು.
ಬಾಂಬೊಲದಲ್ಲಿ ಹುಂಬ ಗಾಳಿಗುರುಬ
ತರುಬಿದುಣ್ಣೆ ಕುರಿಮರಿಗಳ ಕಿರಿ ಹಿಂಡು:
ಇದೂ ಒಂದು ಸೋಂಗು!

ಮಲೆನಾಡಿನ ದಟ್ಟಡವಿಯ ಒಡಲಿನಲಿ
ಮತ್ತ–ಗಜ–ಸಮೂಹ;
ದಾಳಿಯಿಟ್ಟ ದುರ್ಗದ ಬುರುಜಿನ ಮೇಲೆ
ಕೊತ್ತಳದಳತೆಯ ತೊತ್ತುಳಿಯುವ ಗುಲ–
ಗಂಜಿಗಣ್ಣಿನಾ ಬೇಡರ ಪಡೆ, ಆಹ!

ಅಣುಸ್ಫೋಟದೊಲು ವ್ಯೂಹರಚನೆಯಲಿ
ಸಿಡಿಲು ಸಿಡಿಯುವಾ ಸೆಳೆಮಿಂಚೊಗುಮಿಗುವಾ
ಮೇಘದೋಘದಮೋಘ ಪ್ರಯೋಗಶಾಲೆ!
ಬೈಗುಗೆಂಪಿನಲಿ, ನೀಲ್ಗಡಲಲಿ ಹರಿದು
ಬಣ್ಣಬಣ್ಣಗಳ ನದಿ–ನದಗಳು ಮೆರೆದು
ಚಿಕ್ಕೆವೆಳಕಿನಲಿ ಅಚ್ಚತೇಲುವಾ
ಬಿಳಿ ಮುಗಿಲಿನ ಮಾಲೆ!
ಮಧ್ಯಸಮುದ್ರದ ನೀಲ ನಿರಾಳದ ಮೇಲೆ
ಉಡ್ಡಾಣಿಸಿ ವೈಮಾನಿಕನನುಭವಿಸಿರುವ
ಕೆಳಗಣ ನೀಲನಭೋಂಗಣವಾವರಿಸಿರುವ
ಮುಗಿಲೋಳಿಯ ಲೀಲೆ!

❖❖

೨

ಸಾಂಘೀಕ ಜೀವನದೊಂದೇ ಮಾದರಿಯಲ್ಲ.
ಮೋಡವಹುದು ವ್ಯಕ್ತಿ–

ಜೀವನವೊಂದೇ ಜೀವಿತದೆದುರಿನ ಗುರಿಯು;
ಹೃದ್ದೇಶದಿ ಸಂದೇಶವಿದನು ತಳೆದು
ಗೊತ್ತಿಲ್ಲದೆ ದಣಿವಿಲ್ಲದೆ ಅಲೆದಲೆದು
ಸ್ವಚ್ಛಂದದಿ ಕೆಲೆದು
ಸಾರ್ವ ಮೇಘದೂತ!
ನೈಜವು ಪರಿವರ್ತನೆ; ಮರಣವು ಮಾಯೆ:
ಎಂಬ ತತ್ವವನು ತನ್ನಿರವಿನಲರಿತು
ಜನತೆಗದನು ಮೌನಾಂತರ್ಯದಿ ಸಾರ್ವ
ಶೆಲ್ಲಿ ಕವಿ, ವಿನೂತ!

ಉದಧಿಯುಕ್ಕೆ ಮರ ಮುಗಿಲುದ್ದಕೆ ಬೆಳೆದು
ಉದುರಿದೆಲೆಯ ಮೋಡ?
ಸೌಂದರ್ಯದ ನಿರ್ಜರ–ಶಿಶು ಮೇಲೊರಗಿ
ತೇಲಿದಾಲದೆಲೆ, ಓಡ!
ಮೌನದ ವೀಣೆಯ ಸುಳುವಿನಿಂದ ಮಿಡಿದು,
ಹೊಳಹಿನಿಂದ ನುಡಿದು,
ನೀಹಾರಿಕೆಗಳ ಸುವರ್ಣ ಛಾಯೆಯಲಿ,
ತಾರಾವ್ಯೂಹದ ಮಾಯೆಯಲಿ,
ಚಂದ್ರನ ಶೀತಲ ಸ್ಪರ್ಶದಲಿ,
ಸೂರ್ಯನ ರಜತೋತ್ಸವ ಹರ್ಷದಲಿ,
ಗಗನವಿಹಾರಿ, ತ್ರಿಭುವನಸಂಚಾರಿ,
ನೀಲಾಂತರ್ಯಾಮಿ, ವಿಶ್ವಪ್ರೇಮಿ;
ಏಕಾಕಿ–ಆದರೂ ವಿವೇಕಿ!
ಅದುವೇ ನೀರದ, ಅದುವೇ ನಾರದ.

❖❖

೩

ಎಲ್ಲವು ನೀಲಿಮದೊಡಲಲಿ ತಂಗಿತ್ತು.
ಇಬ್ಬನ್ನಿಗಳಾ ಹೆಪ್ಪು ಹೆಡಸಿನಲಿ
ಉಗಿಯೊಲು ತೋರುವ ಉಸಿರಿನ ಸರಣಿ;
ಗಿರಣಿಯ ನಲಿಕೆಯು ತೂರಿದ ಧೂಮ,–
ಅದರ ಕಪ್ಪಿನಲಿ ಕಾಣದು ವ್ಯೋಮ;
ಎಂಜಿನ್ನಿನ ಕಾರ್ಮೋಡದ ಹೊಗೆಯು
ವರ್ತುಲದಲಿ ಮೈಗರೆಯುವ ಬಗೆಯು;
ನದಿ–ನದೋದಧಿಯ ಬಾಷ್ಪೀಭವನ;
ಯಂತ್ರಯೋಗಿಗಳ ಹೋಮ, ಹವನ:
ಎಲ್ಲವು ನೀಲಿಮದೊಡಲಲಿ ತಂಗಿತ್ತು.

ಎಲ್ಲವು ನೀಲಿಮದೊಡಲಲಿ ತಂಗಿತ್ತು
ಅನಾಥ ಬಾಲೆಯ ನಿಟ್ಟುಸಿರು,
ಬವಣೆ ಬಟ್ಟವರು ಬಿಟ್ಟುಸಿರು
ಸಾಯಲಾರದಲೆ ಸತ್ತವರುಸಿರು;
ಕಲ್ಲಿದ್ದಲಿಯ ಹೊಗೆಯೊಲ್ ಅತಿದಟ್ಟವಿಹ ದ್ವೇಷ,
ಕ್ರೂರ ಹೃದಯವ ಕವಿವ ಮಸಣವಟ್ಟೆಯ ಹೊಗೆಯು;
ಹೊಗೆಮಾಡಕಂಟಿರುವ ಕರ್ಪಿನಂತಹ ಸೇಡು;
ಉರವಲದ ಹೊಗೆಯ ಬಾಣತಿಬಿಳುಪಿನಾ ಬೇನೆ;
ಡೊಂಕುತನ, ಡೋಕಾರಿತನದ ತಂಬಾಕುಹೊಗೆ:–
ಮನುಕುಲದ ಜೀವನದ ತಪ್ತ ಕ್ಷಾರೋದಧಿಯ
ಬಾಷ್ಪದೊಲು ಸೇರಿಹವು ಮುಗಿಲ ಗುಮ್ಮಟದಲ್ಲಿ

ಎಲ್ಲವು ನೀಲಿಮದೊಡಲಲಿ ತಂಗಿತ್ತು.
ಕುಸುಮಕೋಮಲ ಜೀವದೂದಬತ್ತಿಯ ಕಂಪು,
ಎಳೆ ಬಾಳ ಹೂಗಂಪಿನಾ ಸ್ವಪ್ನ ಸೌರಭವು;

ಸಮರ್ಪಣ-ಭಾವ-ದೀಪ್ತವಿಹ ಕರ್ಪೂರ;
ಸಾತ್ವಿಕರ ಬಾವನ್ನದಂಪು; ತವಸಿಗಳಗ್ನಿ-
ಯೋಪಾಸನೆಯು; ಭಕ್ತರಿಕ್ಕಿರುವ ಲೋಭಾನ;
ಕಾದಲರು ಕಂಡ ಹಾಲ್ಗನಸು, ಸಕ್ಕರೆಗನಸು:-
ಎಲ್ಲ ಸಂಚಯಿಸಿಹವು ಕಾರ್ಬೊನ್ನ ಹೊಗೆಯೊಡನೆ
ಮುಗಿಲ ಗುಮ್ಮಟದಲ್ಲಿ ತೇಲುತಿಹವು!

ಅಲೆದಾಡುವ ಅಂತರಬೆಂತರಗಳಿಗೆ
ಜಂತರಮಂತರದುಪಾಯವೇ ಇಲ್ಲ!
ದಡದಡ ನಡೆದಿದೆ ಪಿಶಾಚಿಗಳ ದಂಡು
ಕರಿಮೋಡದ ಹಿಂಡು!
ಅಲ್ಲೊಂದಿಲ್ಲೊಂದಲೆದಾಡಿದೆ ಬಿಳಿಮುಗಿಲು:
ಅದಕದೇನೋ ದಿಗಿಲು!

ಮಳೆಮೋಡಗಳಾ ಗೋ-ಶ್ಯಾಮಲ ಬಣ್ಣ
ಸೆಳೆದುದೊಮ್ಮೆ ಕಣ್ಣ.
ಕಾಲಪುರುಷನಾ ಕ್ರೀಡಾಂಗಣವಾಕಾಶ:
ಒಳಿತೋ ಕೆಡಕೋ ಮೊಳಗಿವೆ ಯಥಾವಕಾಶ!

ದುರ್ಗಾಮಾತೆಯ ವಾಹನದೊಲು ಮೆರೆದು
ಆಯಾಲನು ಕೊಡವಿ
ಮುನ್ನಡೆದಿಹುದೀ ಪಂಚಾನನಮೇಘ,
ಮರಿಗಳ ಮೈದಡವಿ.

ವೀಣಾಪಾಣಿಯು ಧ್ಯಾನಮಗ್ನಳಿರಲು
ಅವಳ ಮೇಘಮಯೂರ
ಸೋಗೆಗರಿಗಳನು ಮುಗಿಲ ತುಂಬ ಹರವಿ
ನಡೆದಿದೆ,- ದೂರ, ದೂರ!

ಹಾಲ್ ಬಿಳಿ ಕುರಿಮರಿ ಬೈಗುಗೆಂಪಿನಲ್ಲಿ,
ಹೃದಯದ ಮೇಲಿರೆ ಸಂಜೆಯೊಂದು ಬೊಟ್ಟು,
ನಡೆದು ಕುಲೋದ್ಧಾರಕ ಏಸುವಿನಂತೆ
ಸಾಗಿದೆ ಮೆಲ್ಲನೆ, ಪ್ರಾಣದಾಸೆ ಬಿಟ್ಟು,

ತನ್ನವಯಗಳನೊಳಗೆಳೆಯುತ ಕೂರ್ಮ,
ಈಸುಗಾಲಿನಿಂದ
ತೇಲಿದೆ ಮುಗಿಲಿನ ನೀಲಿಮ ಸಾಗರದಲ್ಲಿ:
ಬರಬಹುದೊಂದಿನ ಮುಕ್ತ ಬಾಳಿನಂದ!

ಬೆದರುಗಂಗಳಿಂದೀಕ್ಷಿಸುವಾ ಸಾರಂಗ
ಕೋಡಿನ ಕೊಂಬೆಗಳಲಂಕಾರವೆತ್ತಿ
ನೋಡಿದೆ ಗಗನದ ವಿಸ್ತೃತ ಕಾನನದಿ:
ಬಂದನೆ ವ್ಯಾಧನು ಬೆಂಬತ್ತಿ?

ಜಲಧರ-ವಿದ್ಯಾಧರರ ಬಳ್ಳಿಯೊಂದು
ಮುತ್ತಿನ ಸೇಸೆಯನಿರಿಸಿ
ಮಳೆಬಿಲ್ಲಿನ ಸಿರಿದೋರಣವನು ಕೋದು
ಮಾಯವಾಯ್ತು ಹರಸಿ!

ಇವೆಲ್ಲ ಬಂದವು; ಅದೂ ಬಂದಿತಲ್ಲಿ
ಕ್ರೂರದಂಷ್ಟ್ರವರಾಹ
ಕರ್ಬುವಿಲ್ಲಿನಾ ಮಳೆಬಿಲ್ಗಳ ಹರಿದು:
ಇದುವೆ ಸಮರಸನ್ನಾಹ.

ಬಂದಿತು ಮುಗಿಲ್ಗಡಲಿನ ಅಷ್ಟಾವಕ್ರ-
ಎಂಟುಗಾಲಿನೇಡಿ:
ಚಾಚಿತು ತನ್ನಯ ತಂತುಪಾಶಗಳನು
ಹೊಸನಾತವ ಬೇಡಿ.

ಗೋಗ್ರಹಣದ ದುಶ್ಶಾಸನನೊಲು ಬಂತು
ಉರಗವು, ಘಟಸರ್ಪ.
ಇದರ ಕೂಂದಲಿಗೆ ಕತ್ತಲಾಯ್ತು ಮುಗಿಲು:
ಅದರುಸಿರೇ ದರ್ಪ.

ಪಡುವಣದಡವಿಯ ರಾಜಕಾರಣಪಟು,
ಬಂದಿತಾ ಶೃಗಾಲ;
ಸುಳ್ಳೆಣಿಕೆಯು, ಅಟಮಟಗಳ ಜಪಮಾಲೆ
ಸದಾ ಸರ್ವಕಾಲ.

ಏಳು ಮೆಟ್ಟುಗಳ ಹಾರಿ ಬರುವ ವ್ಯಾಘ್ರ-
ಕಗ್ಗೊಲೆಯೇ ಆಟ!
ರಕ್ತರಂಜಿತ ವ್ಯೋಮಯಾನವೊಂದೇ
ಅದು ಬೇಡುವ ನೋಟ.

ಬಂತು ತಿಮಿಂಗಿಲ : ಗಗನೋದಧಿಯಲ್ಲಿ
ನೌಕೆಗಳಿಗೆ ಸುರಂಗ!
ಮುಳುಗಿದಲ್ಲಿ ರಾಕ್ಷಸನೊಲು ಬಯಸಿಹುದು
ಸರುವರ ತೇಜೋಭಂಗ.

ಗಂಧರ್ವರ ಗಾನದ ಹೊಳೆ ಹರಿದಿರೆ,-
ಕೊಳ್ಳಿದೆವ್ವಗಳ ಕುಣಿತ;
ಅಪ್ಸರಿಯರ ನೃತ್ಯದ ನೂಪುರಕೆ
ಬ್ರಹ್ಮರಾಕ್ಷಸರ ಭಣಿತ;

ಬೆಳುದಿಂಗಳ ಹಾಲ್ಗಡಲದು ಮೆರೆಯಲು
ದುರ್ದಿನಗಳ ಕವಿನೆಳಲು;
ವರ್ಷಾಕಾಲದ ಧಾರೆಯ ಬೆನ್ನಿಗೆ
ಉರಿಯುವ ಬೆಂಗಾಡಿನ ಮಳಲು:

ಇಂತಿದೆ ಭೂಮಿ, ಇಂತಿದೆ ವ್ಯೋಮ;
ಇಂತಿದೆ ನೀರದ ಸೃಷ್ಟಿ
ಭೂಮಿ-ವ್ಯೋಮಗಳನಾಳಲು ಬೇಕು
ನಾರದನುಜ್ವಲ ದೃಷ್ಟಿ.

❖❖

೪

ಮಂಜಿನೊಳಗಿಂದ ಹಿಂಜುಮೋಡವಾಗಿ
ನಂಜನೊ ಅಮೃತವನೋ ಉಂಡು
ಮತ್ತೆ ಮಂಜಿನಲಿ ಮೈಗರೆಯಲು ರೂಪ,-
ಬಲ್ಲರಾರು ಕಂಡು?

ಕುಂಬಾರನ ತಿಗರಿಯ ಮೇಲುದಿಸುತಿಹ
ಕೊಡಪಾನದ ಕೋಟಿ:-
ಮುಗಿಯದ ಮಂಜಿನ ಮರೆಗೆ ಮೂರ್ತಗೊಂಡ
ಮೋಡವಿದಕೆ ಸಾಟಿ.

ಕೊಡದಲಿ ತುಂಬಿದ ತತ್ವವೇನದರಿದೆ?
ಪೃಥವಿಯೆ? ಆಕಾಶ?
ಅಪ್? ತೇಜ? ವಾಯು? ಏನದೇನು?
ಯಾವುದಕಿದು ಕೋಶ?

ಇಲ್ಲಿದೆ ನೀರದಮೂಲತತ್ವದುಗಮ:-
ಊರ್ಧ್ವಮುಖ ಬಾಷ್ಪ
ಸ್ವಚ್ಛಂದದಿ, ಬಾನ್ ಬಯಲನೆಲ್ಲ ತಿರುಗಿ
ಆಗಿ ಗಗನಪುಷ್ಪ.

ಸೂರ್ಯೋದಯ-ಸೂರ್ಯಾಸ್ತ ವೃಕ್ಷದಲ್ಲಿ
ಮಾಗಿ ಪಯೋಧರಫಲವು
ಅವತರಿಸಿದೆ ರಸಗಂಗೆಯಾಗಿ ಮತ್ತೆ-
ನೆಲಸುತ ನೆಲದೊಳಗದರೊಲವು!

ಇದೇ ನೀರದ-ನಾರದರ ಸೂತ್ರ:
ಊರ್ಧ್ವತೆ, ಚಲನ, ಧಾರಣ, ಅವತರಣ.

ಇದನುಳಿದೆಲ್ಲವು ಕಾಮ, ವಾಮಮಾರ್ಗ
ಬೆಂತರಬೂದಿಗಳಾಟ! ಕಾಲಹರಣ

ಚಿನ್ನಭವಿದು ಗುಣರಹಿತ, ವರ್ಣರಹಿತ
ಸೌಂದರವದಕಿಹ ನವಿಲ್ಗರಿ ತಲೆದುಡುಗೆ;
ಪ್ರೇಮವು ಸುತ್ತಿದ ಮಾಯೆಯ ಜವ್ವನಿಕೆ;
ಸತ್ಯವು ವಜ್ರದ ಕವಚ, ರನ್ನದೊಡಿಗೆ;
ಸಾತ್ವಿಕತೆಯದು ಚಂದ್ರಿಕೆಯಾವರಣ;
ಆನಂದವು ನಾವ್ ಕಲ್ಪಿಸಿದೆಳೆವಿಸಿಲು;
ಶಕ್ತಿಯು ನಾವದಕಾರೋಪಿಸಿದಲಗು:
ಅದಿಲ್ಲ ಇದಿಲ್ಲ:– ಬಯಲಿಗೆಲ್ಲಿ ಟಿಸಿಲು?

ಅಹುದು ನಭವು ಗುಣರಹಿತ, ವರ್ಣರಹಿತ.
ಸ್ವಾರ್ಥವದಕೆ ನಾವ್ ಕುಡಿಸಿದಂಥ ನಂಜು;
ಮೋಸವದಕೆ ನಾವ್ ಹಾಕಿದ ಮೊಗವಾಡ;
ಕ್ರೌರ್ಯ ನಾವೇ ಎರೆದೆಣ್ಣೆಯುರಿವ ಪಂಜು;
ಅನೃತ ನಾವೇ ಬೀಸಿರುವ ಕೃಷ್ಣಜಾಲ;
ದ್ವೇಷ ನಾವೇ ಹೊತ್ತಿಸಿದ ಧೂಮಮಾಲೆ;
ತಮವು ನಾವೇ ಅಂಟಿಸಿದ ಶ್ಯಾಮಲೇಪ;
ರಜವು ನಾವೇ ಇಡಿಸಿರುವ ಸಿಂಪಿನೋಲೆ.

ಅಂತೇ ದುರ್ಗಾದೇವಿಯ ಸಿಂಹ.
ಅಂತೇ ಮೇಘಮಯೂರ.
ಅಂತೇ ಕುರಿಮರಿ, ಕೂರ್ಮ, ಸಾರಂಗ,
ಅಂತೇ ವಿದ್ಯಾಧರ, ಘೋರ
ವ್ಯಾಘ್ರ, ವರಾಹ, ಸರ್ಪ, ಶೃಗಾಲ,
ತಿಮಿಂಗಲ, ಏಡಿ:
ನೆನೆಸಿದ ರೂಪವ ತಳೆವುದು ನೀರದ,–
ನಾವ್ ಬಂದೊಲು ಬೇಡಿ!

❖ ❖

೫

ಬಣ್ಣದೊಳಗಿಂದ, ಬಯಕೆಯೊಳಗಿಂದ,
ಒಳಿತಿನೊಳಗಿಂದ, ಕೆಡಕಿನೊಳಗಿಂದ,
ಚಂದ್ರಿಕಾತಲ್ಪ ನಿದ್ರೆಯೊಳಗಿಂದ,
ಬಿಸಿಲ ಬೇಗೆಯಾ ಮುದ್ರೆಯೊಳಗಿಂದ,
ಬಿಡಿಸಿಕೊಂಡು ಬಾ,
ಬಾ, ಬಾ, ಬಾ,
ಓ ನೀರದ ಬಾ!

ತಮವು ತೋಡಿದಾ ನರಕದೊಳಗಿಂದ,
ರಜವು ಹೂಡಿದಾ ರಣಾಂಗಣದಿಂದ,
ಸತ್ತ್ವ ರಚಿಸಿದಾ ಸ್ವರ್ಗದೊಳಗಿಂದ;
ನಿರ್ಗುಣಗಳ ನಿರ್ವಯಲ ಸೆರೆಯಿಂದ,
ಗುಣಗಣಂಗಳಾ ಮುಚ್ಚುಮರೆಯಿಂದ;
ರೂಪದಿಂದ್ರಜಾಲಗಳ ಹೊರೆಯಿಂದ,
ರೂಪವಿಲ್ಲದಾ ಶೂನ್ಯದೊರೆಯಿಂದ;
ಜಡದ ವಾದಜಂಜಡದ ಜಡೆಯಿಂದ,
ಏಕಮೇವ ಚೈತನ್ಯದೆಡೆಯಿಂದ
ಸಾರ್ವಭೌಮ ಮರ್ತ್ಯತೆಯ ಮುಡಿಯಿಂದ,
ಕೈವಲ್ಯದ ಅಮರತೆಯ ಅಡಿಯಿಂದ,
ಅರ್ಧಮರ್ಧ ದರ್ಶನದ ಗುಡಿಯಿಂದ:
ಬಿಡಿಸಿಕೊಂಡು ಬಾ,
ಬಿಡಿಸಲೆನ್ನ ಬಾ,
ಬಾ, ಬಾ, ಬಾ,
ಓ ನೀರದ, ಬಾ!

೬

ನಿನ್ನ ಜೊತೆಗೆ ಬಂದು ನಿಂತೆ, ನೀರದ.
ಉದ್ದಕಿದೆ ದಾರಿಯಿಲ್ಲಿ ತೀರದ, ತೋರದ!

ಮೂಡಣದಲಿ, ಪಡುವಣದಲಿ ಇಬ್ಬನಿಯ ರಾಶಿ:
ಊರುಕೇರಿ ಮುಳುಗಿದವು; ರಾಮೇಶ್ವರ, ಕಾಶಿ.

ಹಿಮಾಲಯವೆ ಮಂಜಾಗುತ ಹಬ್ಬಿತೇನೊ ಇಂತು?
ನೆಲಮುಗಿಲುಗಳೆಲ್ಲ ಮಂಜು: ಮಂಜಿನ ಯುಗ ಬಂತು.

ಸ್ಫಟಿಕದಂತೆ ಶುಭ್ರವಿರುವಿ: ಬಣ್ಣದಾಟ ಬೇಡವೆ?
ಬರಿಯ ಮಂಜಿನಾಕೃತಿ: ಸುಭಗಾಕೃತಿ ನೋಡೆವೆ?

ಮೌನವಿದೆ; ಗಾನವೆಲ್ಲಿ? ತಂತಿಯಿದೆ; ತಾನವೆಲ್ಲಿ?
ಸಾಕ್ಷಿಯಿದೆ; ಸೃಷ್ಟಿಯೆಲ್ಲಿ? ಸುರಸ ವೃಷ್ಟಿಯೆಲ್ಲಿ?

ಸ್ಫಟಿಕಶಿಲಾಮೂರ್ತಿಯಂತೆ ಉಗಿಯೊಳಗಿನ ರೂಪ.
ಪೂಜಾಮಂದಿರವೆಲ್ಲಿದೆ? ನೀ ಎತ್ತಿದೆ ಧೂಪ.

ಯಾವ ವಿಶ್ವಮಾತೆ ನಿನ್ನ ಹೆತ್ತಳವಳ ಸಂತತಿ
ಎತ್ತದಿಹುದೆ,– ಅವಳಿದೆಂದು ಪ್ರಾಣದ ಪಂಚಾರತಿ?

ಎಲ್ಲ ಬೇಕು; ಬಣ್ಣ ಬೇಕು. ಕಣ್ಣದೊಂದೆ ಸಲ್ಲದು.
ಬರಿಗಣ್ಣಾಗಿರುವ ಪ್ರಾಣ ಕೃತಿಯನೆಂತು ಬಲ್ಲದು?

ನಾ ನಿಂತೆನು ಕಣ್ಣಾಗುತ್ತ ನಿನ್ನ ಜೊತೆಗೆ, ನೀರದ!
ವಿಶ್ವವೆಲ್ಲ ಶೂನ್ಯವಾಯ್ತು, ತೀರದ, ತೋರದ!

ದ್ವೇಷದ ಕಾರ್ಬೊನ್ನ ಹೊಗೆಯು ನಿರ್ನಾಮವಾಗಲಿ;
ಪ್ರೀತಿಯ ಲೋಭಾನ ಮಾತ್ರ ವಿಶ್ವದಲ್ಲಿ ತೂಗಲಿ.

ಕೆಡಕದೆಲ್ಲ ಕುಳ್ಳುಬಾನದಂತೆ ಚಿತೆಯನೇರಲಿ;
ಒಳಿತು ಮಾತ್ರ ಇಂದ್ರಧನುವಿನಂತೆ ಒಸಗೆ ಬೀರಲಿ.

ಅನೃತವೆಲ್ಲ ಬಾಲಚಿಕ್ಕೆಯಂತೆ ಕ್ಷಯಿಸಿ ಕಳೆಯಲಿ;
ಸತ್ಯವು ತಾ ನಡುನೆತ್ತಿಯ ಸೂರ್ಯನಂತೆ ಹೊಳೆಯಲಿ.

ಚಂದ್ರಿಕಾತಲ್ಪದಂತೆ ಚೆಲುವಾಗಲಿ ಹಾಸಿಗೆ.
ಕೌರೂಪ್ಯವು ಲಯವಾಗಲಿ: ಹೂತರೂ ಹೇಸಿಗೆ.

ಆನಂದವು ಕೊನರುತಿರಲಿ ಅಮೃತಬಳ್ಳಿಯಂತೆ.
ದುಃಖವೆಲ್ಲ ದಗ್ಧವಿರಲಿ ಮುಳ್ಳುಗಳ್ಳಿಯಂತೆ.

ಅಸಹಾಯಕತೆಯೆಲ್ಲ ಬೆಂದು ಬೂದಿಯಾಗಿ ಬೀಳಲಿ.
ಶಕ್ತಿಯೆ ತಾ ದುರ್ಗೆಯಾಗಿ ತ್ರಿಭುವನಗಳನಾಳಲಿ.

ಎಂದಾದರು ಮೂಡಬಹುದೆ ಬೆಳ್ಳಿಯು, ಈ ಶುಕ್ರ?
ಏನಿದೀ ಪ್ರಪಂಚವಹುದೊ ಎಂದೆಂದಿಗು ವಕ್ರ?

ಅನಾದ್ಯನಂತ ಕಾಲದಲ್ಲಿ ಬರಿ ಬಾಷ್ಪೀಭವನ:
ಶೂನ್ಯಾಲಯ, ಬರಿ ಮಂಜಿನ ತವರಿದಯ್ಯ ಭುವನ!

ಸೃಷ್ಟಿಯಿರಲು ಒಳಿತು–ಕೆಡಕು ರಸ–ವಿರಸದ ಮಿಶ್ರಣ.
ನಿನ್ನಂತೆಯೆ ನಾ, ನೀರದ, ಉಗಿಮೋಡದ ಪಯಣ!

ಎಂದಾದರು ಮೂಡಬಹುದೆ ಬೆಳ್ಳಿಯು, ಈ ಶುಕ್ರ?
ಏನಿದೀ ಪ್ರಪಂಚವಹುದೊ ಎಂದೆಂದಿಗು ವಕ್ರ?

❖❖

೭

ಒಮ್ಮೆ ಗಿರಿಗಳ ತನೂರುಹಗಳನು ತರಿದೊಟ್ಟಿ
ವಜ್ರಾಯುಧದ ಕೀರ್ತಿ ಮೊಳಗಿಸಿದನು;
ಸಂಹಾರದಲಿ ಕೈಯ್ಯ ಪಳಗಿಸಿದನು;
ಧರೆಗೆ ಪರ್ವತಗಳನು ಕೀಲಿಸಿದನು.
ಈಗ ಜಲಧರಸೃಷ್ಟಿ ಶಾಸನಕೆ ಕೈನೀಡಿ
ನವಿರುನವಿರಲಿ ಕಣ್ಣು ತೆರೆದು ನೋಡಿ
ಇಂದ್ರ ಬಂದಿಹನಿಲ್ಲಿ ಸೆಳೆಮಿಂಚನಾಡಿಸುತ,
ವಜ್ರಾಯುಧದ ಪ್ರಭೆಯ ದಿಗ್ದೆಸೆಗೆ ಮೂಡಿಸುತ.

ಸಿಡಿಲ್‌ಸಿಡಿದಿತು. ಒಡಲೊಡೆದಿತು, ಕಡಲ್‌ಕಡೆದಿತು ನೋಡ!
ಭಾಸುರೇಂದ್ರ ಬಂದ, ಕಾಣು ವಜ್ರದ ಕೈವಾಡ!
ಒಡ್ಡಣಿಸಿದವೆಲ್ಲ ಮೋಡ ದುರ್ಗಮ ಕಗ್ಗೋಂಟೆಯಾಗಿ,
ಇಂದ್ರ ಬರಲು ಬೇಂಟೆಗಾಗಿ.
ಒಗೆದ ಮಿಂಚಿನೊಂದು ಕಿರಣಕೆ,
ಕಪ್ಪಿಟ್ಟವು ರಕ್ಕಸಮೊಗ ಮಾನಹರಣಕೆ!
ಮೇಘನಾದ ಯಾವ ಗಿಡದ ತೊಪ್ಪಲು,
ಮಲೆತು ನಿಂತನವನು ತನ್ನ ಸಾವನ್ನಪ್ಪಲು!
ನಿಲಲಿಂದ್ರ ರಣಗರ್ಜನೆಯ ಗುಡುಗು ಹಾಕಿ,
ಸತ್ತಿತು ಶೃಗಾಲ: ಹೆಣವೊಂದೆ ಬಾಕಿ.
ಎಲ್ಲ ಸುಳ್ಳಿನ ಸುಳಿಯ ಹಿಡಿದು ಕೀಳುವ ನೇಗಿಲ;
ಎಲ್ಲ ತಮವನು ಕಳೆವ ಬೆಳ್ಳ ಬೆಳಕಿನ ಬಾಗಿಲ;
ಎಲ್ಲ ರಜವನು ರೊಜ್ಜಿನಲಿ ಹುಗಿವ ರಾಜತೇಜ;
ಎಲ್ಲ ಕೆಡುಕನು ಲಯದ ಗರ್ಭದಲಿ ತೊಡೆವ ಓಜ:
ಎಲ್ಲ ಕಾಮದ ಬೂದಿಯಾಗಿಸುವ ಶಿವಶಂಕರ;
ಎಲ್ಲ ನಿಷ್ಪಾಪಿಗಳ ರಕ್ಷಕನು ಕರುಣಾಂಕುರ:
ಇಂದ್ರಾಯುಧವಿಂತೆಸೆಯಿತು;

ಕೆಡುಕಿನೆದುರು ಮಸೆಯಿತು!
ಕೆಳಗುರುಳಿರಲಾ ವರಾಹ,
ವ್ಯಾಘ್ರವು, ಘಟಸರ್ಪ;
ಮುಗಿಲ್ಗಡಲಿನ ತಳದಿ ಮುಗಿದು
ತಿಮಿಂಗಿಲದ ದರ್ಪ.

ಇಂದ್ರನಾಗಮನಕ್ಕೆ ಪುಳಕಗೊಂಡವು ಸತ್ತ್ವ
ತುಂಬಿರುವ ಮುಗಿಲ ಗುಂಪು:
ಪ್ರೀತಿ ಸಂತತಧಾರೆಯಾಗಿ ಸುರಿಯಲು ಧರೆಗೆ
ಬಂತೊಂದು ಹೊಸತು ಕಂಪು.
ಇಂದ್ರ ಸಂಹರಿಸಿರುವ ಕಾರ್ಮೋಡ–ಕೆನ್ನೀರು
ಸುರಿಸಿ ಲಯವಾದವಲ್ಲಿ;
ಸೃಷ್ಟಿಪುಟದಲಿ ನವ್ಯವಿಕಸನದ ದಾರಿಯಲಿ,
ಸತ್ತಿರುವ ಗೋಣು ಚೆಲ್ಲಿ.

ನೂತನ ಸಾಗರವ ಸೇರಿ
ನವ್ಯನಭದ ಸೀಮೆಗೇರಿ
ನವ ವಿಶ್ವದ ನಾಂದಿ ಬೀರಿ,–
ಹೊಸ ಮನುವನು ಕರೆತಂದು
ನವ ಮಾನವ ದೇವನೆಂದು
ಸೃಷ್ಟಿಯೆ ಕೈಲಾಸವೆಂದು,
ಇಂದ್ರಾಯುಧ ಬೆಳಕು ಹಾಸಿ,
ಗರುಡಪಕ್ಷಿ ರೆಕ್ಕೆ ಬೀಸಿ
ಕರೆದಿಹ ನವನೀರದದಲಿ ಅರುಣೋದಯ ಮೂಡಿತು.
ಅದರೆದೆಯೊಂದೊಂದು ಕಣವು ಉದಯರಾಗ ಹಾಡಿತು.

ಅಸುರ ಕುಲದ ಹಡಗವಲ್ಲ,
ಅಪ್ಸರಿಯರ ದೋಣಿಯಲ್ಲ,
ಕಿನ್ನರಿಯರ ನಾವೆಯಲ್ಲ,
ಗಂಧರ್ವರ ಓಡವಲ್ಲ:–
ನವಮಾನವ ಸಂಸಾರದ ವಿಸ್ತಾರದ ನೌಕೆ:
ಪಾವನತಮವಾಗಿ ನಲಿವುದದರ ಧ್ರುವ ಪತಾಕೆ!

ಬಣ್ಣವಿದ್ದರೂನು ಸ್ಫಟಿಕ;
ಜಡವೆಂದೊರೆದರು ಚಿನ್ಮಯ;
ಮರ್ತ್ಯವಿದ್ದರೂನು ಅಮರ;
ಚಲಸಿದರೂ ಶಾಂತಿಮಯ;
ತಾನೊಂದೇ ಒಂದು; ಆದರು ನೂರೊಂದು;
ಲೀಲೆಗಾಗಿ ವಿಕಸನವೆಂಬರಿವನಾಂತು ಬಂದು,
ಮಾಯೆಯ ಸೊಂಕಿಲ್ಲದಂತೆ,
ವಿಕೃತಿಯ ಕೊಂಕಿಲ್ಲದಂತೆ,
ಪಡಿನೆಳಲೇ ಕವಿನೆಳಲಿಹ

ಅನ್ಯಾಯವು ಕವಿಯದಂತೆ,–
ಸಾತ್ವಿಕ ಭಾವಗಳ ಬೆಳಗಿ
ವಿವಿಧ ರೂಪಗಳಲಿ ತೊಳಗಿ
ಪೂರ್ಣವಿದರ ಪೂರ್ಣತೆಯನು
ವಿಕಸನಪಥದಲ್ಲಿ ತೋರಿ
ನೀರದ ತಾನಲೆಯುತಿದೆ
ಧ್ರುವಪಥದಲಿ ಕಾಂತಿ ಬೀರಿ.

೮

ಇಕ್ಷುವಿನುಪಾಖ್ಯಾನ, – ಇಕ್ಷ್ವಾಯಣ.
ಇದುವೆ ಮನ್ವಂತರದ ರಾಮಾಯಣ.

ನವ ನೀರದವದು ಮುಗಿಲೊಳಲೆಯುವಂತೆ
ಬುವಿಯೊಳಲೆದನಿಕ್ಷು.
ಅವನಾಂತರ್ಯದಿ ಮುಗಿಲೆ ವಾಸಿಸಿತ್ತು,
ತೆರೆದಂತಶ್ಚಕ್ಷು.

ಒಂದಿನ ಕೇಳಿದನಿಕ್ಷು ಮಹೇಂದ್ರನನು:
"ಆದಿ ಶಕ್ತಿ ಯಾರು?"
ದೇವಮಾನವನು, "ನವ ಸಂತತಿ ನಾನು:
ನನಗವಳನು ತೋರು!"

"ರೂಪವಿದ್ದರೂ ನಿರಾಕಾರ ನಾನು
ಗುಣಗಣಮಂಡಿತನಿದ್ದರು ನಿರ್ಗುಣನು.
ವಿಕಸನಪಥವೇ ನನ್ನಿರವಿನ ಧ್ಯೇಯ.
ನೋಂಪಿಯ ನೋಂತರು ಮೂಲದಿ ನಿಸ್ಪೃಹನು."

ಇಂದ್ರನೆಂದ: "ಓ ಇಕ್ಷು! ಸಾವಧಾನ.
ಆದಿ ಶಕ್ತಿಯನು ಕಾಂಬ ಕಣ್ಣ ಪರಿಯು
ತೀರ ಬೇರೆಯಿದೆ. ನಿನ್ನ ಕಣ್ಣಗೊಂಬೆ
ಎಳಕದ ಮಾದರಿ. ಕಾಣದು ಐಸಿರಿಯು."

ಇಕ್ಷುವೆಂದ: "ಓ ಇಂದ್ರ, ಚರ್ಮಚಕ್ಷು
ತೆರೆಯಲು, ತೆರೆದಿದೆ ಕಣ್ಣೊಳಗಿನ ಕಣ್ಣು

ಹಣೆಗಣ್ಣರೆಬಿಚ್ಚಿದೆ; ಅನಿಮಿಷನೇತ್ರ
ಹೃದ್ದೇಶದೊಳುನ್ಮೀಲಿತವಿದೆಯೆನ್ನು."
"ಇಂತಿರಲೆಲ್ಲಿದೆ ನಾಟದಂಥ ನೋಟ?
ವಂಚಿಪುದಾವುದು ಮಾಟದಂಥ ಮೋಡಿ?
ಹಂಬಲ ಹಿರಿದಾಗಿದೆ. ಆಲಿಸು ಕರೆಯ.
ಆದಿ ಶಕ್ತಿಯನು ನಾ ತಣಿಯುವೆ ನೋಡಿ".

ಇಂದ್ರನೆಂದ: "ಕಡಲನು ಕುಡಿದವರುಂಟೆ?
ಸನಿಯದ ಲೋಕದ ಮಾತೆಯ ತಿಳಿ ಮೊದಲು.
ಶಚೀದೇವಿ, ಮಮ ಮಡದಿಯನ್ನು ತೋರ್ವೆ.
ನೋಡು ಕಣ್ತುಂಬ ಅವಳಡಿಯಲಿ ತೊದಲು".

ಶಚೀದೇವಿ ಸುಳಿದಳು ಇಕ್ಷುವಿನೆದುರು
ರುಚಿರರೂಪ, ಶುಚಿರೂಪ, ಮಧುರರೂಪ!
ತಾರೆಗಳೆಸೆದವು ಕುಂದದ ಮಂದಾರಗಳು,
ಯಾ ಹೆರಳಿನಲಿ: ಚೆಲುವಿಗೆಲ್ಲಿ ಲೋಪ?

ಇಕ್ಷು ನೋಡಿದನು. ತಲ್ಲಣಿಸಿತು ಹರಣ
ತಿಲ್ಲಾಣಿಸಿತವನೆದೆಯಂತಃಕರಣ.
ಅನಿಮಿಷನೇತ್ರವನಾವರಿಸಿತು ಮಾಯೆ.
ಗೆದ್ದಿತು ಮೋಹದ ಮಂತ್ರವಶೀಕರಣ.

ಯಾವ ಜನ್ಮದಾ ಕರ್ಮ ಕುದಿಯಿತೇನೊ!
ಹಿಂದಕಿಂದ್ರನೆಸಗಿದ ಪಾಪದ ಫಲವೊ?
ದುಃಶಕ್ತಿಗಳಾಲೋಚಿಸಿದೊಳಸಂಚೊ?
ಗ್ರಹಗಳ ಕಾಟವೊ? ಕಂದರ್ಪನ ಬಲವೊ?

ಇಕ್ಷುವೆಂದ: "ನಾ ಪುರುಷ, ನೀನೆ ಶಕ್ತಿ,–
ಓ ಚೆಲುವೆಯೆ!" ಎಂದನು ಕುಣಿಕುಣಿದಾಡಿ.
ನಲ್ಲೆಯೆಂಬ ಭ್ರಾಂತಿಯಲಿ ಮುಂದುವರಿದ

ಶೃಂಗಾರಾನ್ವಿತ ದೃಷ್ಟಿಯಿಂದ ನೋಡಿ.
ಕಿಡಿಕಿಡಿಯಾದ ಸುರೇಂದ್ರ; ಪತನವಿದನು
ಸರ್ವ ಕಾಲ ನೆನೆಯುವೊಲು ದಂಡಿಸಿದನು.
ಶಚೀದೇವಿಯೊಲು ರೂಪವರ್ಣವಿತ್ತು
ಮೋಡವೊಂದನವನೆದುರು ಮಂಡಿಸಿದನು.
ಇಕ್ಷು ತಬ್ಬಿದನು ಬಾಹುಪಾಶದೊಳಗೆ
ಮುಗಿಲ ಮಾಯೆಯನು, ನೀರದನೀರೆಯನು,
ನೆಳಲನು ಮೋಡದ ಉಗಿಮಾಡದೊಳಲೆದು
ಹೊನ್ನಿಯ ಹುಳದಲಿ ಕಂಡನು ತಾರೆಯನು.

ಸಿದ್ಧ ಪುರುಷ, ಜಿನ, ಅನುಭಾವಿಯು, ಶರಣ,
ಆದಿಪುರುಷ ತಾನೆಂದು ಘೋಷಿಸಿದನು.
ಲಲ್ಲೆವಾತುಗಳ ಮಳೆಗರೆಯುತಲವನು
ಇಂದ್ರಜಾಲದಲಿ ನೆಳಲ ಪೋಷಿಸಿದನು.

ಶೂನ್ಯತೆಯೊಡನವ ಬಾಳಿದ ಬಾಳುವೆಗೆ
ಲೋಕವಿಲಕ್ಷಣ, ವಿಚಿತ್ರ ಸಂತಾನ.
ಮುಟುಕವಾಯ್ತು: ಅನಪೇಕ್ಷಿತ ಫಲಪ್ರಾಪ್ತಿ!
ಜೀವನಸೂತ್ರಕೆ ವಿಸ್ತೃತ ವ್ಯಾಖ್ಯಾನ.

ಅರ್ಧಮಾನಿಸರು, ಅರ್ಧ ಕುದುರೆಮೆಯ್ಯು,
ಅಶ್ವಮಧ್ಯದಾ ಸಂತತಿ ಹುಟ್ಟಿದೊಲು,
ಅರ್ಧ ನೆಳಲು ಇನ್ನರ್ಧ ತಿಳಲದಾಗಿ
ಔರಸರೊಗೆತಂದರು, ಗುರಿ ಮುಟ್ಟಿದೊಲು,–

ದಾರ್ಶನಿಕರು, ತಾತ್ವಿಕ, ಮಾಯಾವಾದಿ,–
ಅರ್ಧಮರ್ಧ ಪ್ರಜ್ಞೆಯಲಿ ಪಳಗಿದವರು,
ಅನುಭವದರ್ಥಕೆ ತತ್ತ್ವದರ್ಥವನ್ನು
ಕೀಲಿಸಿ ತೇಲಲು ಬಯಸಿ ಮುಳುಗಿದವರು;

ಶಾಕ್ತ, ವಿಶಿಷ್ಟಾದ್ವೈತಿಯು, ಅದ್ವೈತಿ,
ದ್ವೈತಾದ್ವೈತಗಳುಪಶಾಖೆಗಳವರು,
ಬೌದ್ಧರು, ಜೈನರು, ಬೇರೆ ಶ್ರದ್ಧೆಯವರು,
ನವ ಮಾನವತಾವಾದಕಂಟಿದವರು,

ಭೌತವಾದಿಗಳು, ಚಾರ್ವಾಕರು ಎಲ್ಲ
ಕನಸು–ನನಸುಗಳ ಬೆರಸುತ ಮುನ್ನಡೆದು
ಅನುಭವದಾವರಣಕೆ ತತ್ತ್ವವ ಹೊದಿಸಿ,
ಜೇನು ತೆರವಾದ ಜೇನುಹುಟ್ಟು ಪಡೆದು
ಓಲಾಡಿದರಾ ನೆಳಲು ನಾಡಿನಲ್ಲಿ,
ಉರುಳಾಡಿದರಾ ಛಾಯಾದೇಶದಲಿ:
ಚಕ್ರವರ್ತಿಗಳು ನೀರದರಾಜ್ಯದಲಿ;
ಅಧಟರು, ಯೋಧರು, ಮಾಯಾಪಾಶದಲಿ!

ಸುತ್ತುತಿರುವುದಲ್ಲೊಂದು ಕರ್ಮಚಕ್ರ:
ಧರ್ಮಚಕ್ರವೆಂದದನವರೇರಿದರು;
ತಮ್ಮ ತಮ್ಮ ಹಂತದ ಸ್ಥಾನದಿ ಕುಳಿತು
ತಾವ್ ಕಂಡುದೆ ಋತವೆನ್ನುತ ಸಾರಿದರು.

ಕಸರತ್ತಿಂತಿದು, ಜೀಕುದೊಟ್ಟಿಲಾಟ,
ಯಂತ್ರಾರೂಢರಿಗಿರುವದು ಅನವರತ.
ಈಕ್ಷಿಸಿದನಿಕ್ಷುವತಿವ್ಯಾಕುಲಗೊಂಡು:
ದರ್ಪಣವಿದರಲಿ ಬಿಂಬಿಸಿಹುದು ದುರಿತ!

ಡೊಂಬರಾಟವಿದಕವನೆ ಉಗಮಪುರುಷ.
ಬಂಜೆಮೋಡದೊಳಗವನದೆ ಸಂತತಿಯು.
ನೀರದಶಚಿಯಿಂದಾಚೆ ದೂರ ದೂರ
ಓಡಿದನಿಕ್ಷು. ಮಿಗಿಲಾದುದು ವ್ಯಥೆಯು.

ಕೈ ಜೋಡಿಸಿ ಪ್ರಾರ್ಥಿಸಿದನಿಕ್ಷು: "ಇಂದ್ರ!
ನೆಳಲೆ ವಧುವಾಗಿ, ನೆಳಲೆ ವಂಶವಾಗಿ,-
ನೆಳಲಿನ ಕೈಹಿಡಿದೆನಗಪಾರ ಅಳಲು:
ನರಳುವೆನೀ ವಿಷಸರ್ಪದಂಶವಾಗಿ!"

"ನನಸಿನ ನಾಡಿನೊಳಿರಿಸುತೆನ್ನನುಳಿಸು.
ಮಾತೆಯ ವಧುವೆಂದೆನು. ರವರವನರಕ
ನನ್ನದಾಯ್ತು. ತೆರೆದಿಹುದು ಮೂರ್ಧ್ನ ನೇತ್ರ,
ತೋರಿಸು. ಪಡೆದಿಹೆ ಋತವ ಕಾಂಬುವೆ ಸಖ!"

ಪಶ್ಚಾತ್ತಾಪಪುನೀತರಾತ್ಮಸಖನು,
ಅಮರಾಪಗೆಯಲಿ ಮಿಂದವರ ಸುರೇಂದು
ಸಹಸ್ರಾಕ್ಷನವ ಬಂದ ಭಾಸುರೇಂದ್ರ,
ಸಹಸ್ರಬಾಹುವು ಆರ್ತನೆದುರು ನಿಂದು.

೬

ಮೇಲೆ, ಮೇಲೆ, ಮೇಲೆ,
ಹಿಮಗಿರಿಯ ಶೃಂಗಮಾಲೆಗಳ ಮೇಲೆ,
ಎಲ್ಲಿ ಪಾರ್ವತಿ ಪ್ರಿಯನಿಗಾಗಿ ಹಾಕಿದಳು ಮಾಲೆ,–
ಅಲ್ಲಿ–ಆ ಕೈಲಾಸಗಿರಿಯ ಮೇಲೆ
ಇಕ್ಷುವನು ತನ್ನೆದುರು ಕುಳ್ಳಿರಿಸುತ
ವೈನತೇಯನ ಬೆನ್ನ ಮೇಲೆ,
ವಾಯುವೇಗದಿ ತನೂರುಹವ ಬೀಸಿರಲು
ಗರುಡಗಣ್ಣಿನ ಕೆಳಗೆ ಭೂಮಿ ಹಾಸಿರಲು,
ನದಿನದಗಳಲ್ಲಲ್ಲಿ ರೇಖಿಸಿರಲು
ಗರುಡವಾಹನನಿಳಿದ ರಜತಗಿರಿ ತುತ್ತ ತುದಿಗೆ
ಕಣ್ಣು ಬಿರಿಬಿರಿ ಬಿಡುವ ಇಕ್ಷು ತಾನಿರಲು ಬದಿಗೆ.

ಅಡಿಯಿಡುತಲಾ ಸಹಸ್ರಾಕ್ಷನು, ಸಹಸ್ರಬಾಹು.
ತಿಳುಹಿದನು ಹಿರಿಯ ಬೇಹು,
ಹಿಗ್ಗುತಿರಲವನ ರೂಹು:
ಇಕ್ಷು ನಿಂತನು ಬದಿಗೆ: ಪಾಂಡವ ವಿರಾಟನಡಿಗೆ:
ನಿಟ್ಟಿಸಿದ ಸುತ್ತು ಹಬ್ಬಿರುವನಂತತೆಯ ಕಡೆಗೆ;
ಕೇಳಿದನು ವೈನತೇಯನು ಮೌನಭಕ್ತಿಯಲ್ಲಿ
ವಿರಮಿಸಿರೆ, ಧ್ಯಾನವರ್ಷಿಸುತಾದಿಶಕ್ತಿಯಲ್ಲಿ.

"ನೋಡಿಲ್ಲಿ ಭೂದೇವಿ ಪಡೆದ ವಿಸ್ತಾರಗಳನು,
ತೆರೆಯ ಮೇಲ್ ತೆರೆಯೊಲಿಹ ಶಿಖರಗಳ ಸಾಲುಗಳನು!
ಆದಿಶಕ್ತಿಯ ತೇರಿನಂತಿರುವ ಶೃಂಗಗಳನು,
ಅವಳಣುಗರಾಟಕಿಹ ವಿಸ್ತೀರ್ಣ ರಂಗಗಳನು.
ಅವಳಡಿಯ ತೊಳೆದು ಪಾವನವಾಗಿ ಹರಿಯುತಿಹವು
ಹೊಳೆಗಳಿವು; ಬೆಳೆ ಅವಳ ಬೆಳಸಾಗಿ ಮೆರೆಯುತಿಹವು.

ಮೃತ್ತಿಕೆಯ ಕೃತ್ತಿಕೆಗಳಾದ ಗ್ರಾಮಗಳು,
ತವಸಿಗಳ ನೆಲೆವೀಡು, ಪುಣ್ಯಧಾಮಗಳು:
ಎಲ್ಲವಹುದಿವು ಅವಳ ರೂಪನಾಮಗಳು.
ಜಡತೆಯೊಳಗಭಿವ್ಯಕ್ತವಿರುವ ಚೆಲುವು,
ಪ್ರಾಣಿಕೋಟಿಗಳಲ್ಲಿ ಮಿಡಿವ ಬಲವು,
ತಾಪಸರ ಹೃದಯದೊಳು ಹರಿವ ಒಲವು:
ಅವಳಕ್ಷಮಾಲೆಯೊಳಗಿರುವ ಅಕ್ಷಿ:
ಅವಳ ಪಂಜರದಲಿಹ ಪ್ರಾಣಪಕ್ಷಿ.
ಅವಳ ಪರಮಾದ್ಭುತಕೆ ಅವಳೆ ಸಾಕ್ಷಿ!"

"ದಾಟು ಕ್ಷಿತಿಜದದೃಶ್ಯರೇಖೆಯನು, ಎವೆಯೆತ್ತಿ,
ತಲೆಯೆತ್ತಿ ನೋಡು ನಿರ್ವಯಲ ನಿಸ್ಸೀಮೆಯನು;
ಶೂನ್ಯವೇ ಬೆಸಲಾಗಿ ಕೋಟಿ ನಕ್ಷತ್ರವನು
ಬಯಲ ಮಂಟಪದಲ್ಲಿ ಬರೆದಿರುವ ಹಿರಿಮೆಯನು.
ದಿವ್ಯಸ್ಫುರಣಕೆ ಹೊಳೆದು ವಿಸ್ಫಾಲಿಸುವ ನೇತ್ರ,
ಅಳೆದು ನೋಡವುಗಳೊಂದೊಂದು ಕಿರಣದ ಗಾತ್ರ!
ತಾಯ ಮೆರವಣಿಗೆಯಲಿ ಹಿಡಿದ ದೀವಟಿಗೆಗಳು,
ಓ! ಸ್ವಯಂಭೂಜ್ಯೋತಿಲತೆಯ ಮಂದಾರಗಳು!
ದಿವ್ಯಮಂದಿರದೊಳಿಹ ಕೋಟಿ ನಂದಾದೀಪ;
ಆನಂದ ಪಡೆದ ನೀಹಾರಿಕಾಹಾರಗಳು!
ನಿನ್ನ ಚಿತ್ತದೊಳಿರಲು ವಿಸ್ಮಯದ ಕಾಣ್ಕೆ,
ನಿನ್ನ ಬುದ್ಧಿಯಲಿ ಜಿಜ್ಞಾಸೆಯಾ ಹೂಣ್ಕೆ:
ಎಲ್ಲವರ್ಪಿಸುತವಳ ಚರಣದಲ್ಲಿ
ಅಮೃತಸ್ಪರ್ಶವನಿರಿಸು ಹರಣದಲ್ಲಿ!"

ತೂಗುತಿವೆಯೊಂದೊಂದು ಹೂಕರಂಡಕದಂತೆ,
ಒಂದೊಂದು ಭುವನವಿಹ ಗ್ರಹದ ಮಾಲೆ.
ಶೂನ್ಯದಲಿ ಸ್ಥಾನವಾಗಿಸುವ ಧಾರಣಶಕ್ತಿ
ಯಾರದೆನೆ,– ಅದೆ ತಾಯ ಸಹಜ ಲೀಲೆ
ಮುರಲೀಧರನ ಸುತ್ತಿ ಗೋಪಿಯರು ತಿರುಗುವೊಲು
ತಿರುಗುತಿಹವೀ ಚಿರಂತನವಿಶ್ವಗಳ ಗುಂಪು
ತಮ್ಮ ಸೂರ್ಯನ ಬಳಸಿ. ಕಾಲಪುರುಷನ ಪ್ರಹರ–
ವಿವುಗಳಡಿವೈಜಣದ ಗೆಜ್ಜೆಯಿಂಪು!

ಒಂದುಲ್ಕೆಯುರುಳುವನಿತರೊಳೆ ಜ್ಯೋತಿರ್ವಿದನ
ದೃಷ್ಟಿಪಥದೊಳಗೇಳ್ವುದಿನ್ನೊಂಗು ತಾರೆ.
ಓರ್ವ ರವಿ ತಂಪಾಗುತಿರಲು, ಕೆಂಪಾಗಿಹುದು
ಬಾನಂಗಳವು ಬೇರೆ ರವಿಯು ತೋರೆ!
ಪೂರ್ಣದೊಳಗಿಂದ ಬಂದೆಲ್ಲ ಪೂರ್ಣದ ಕಡೆಗೆ.
ವ್ಯಕ್ತ ಮಧ್ಯವು ಪೂರ್ಣ ಪೂರ್ಣವವ್ಯಕ್ತ.
ಇದನು ತಿಳಿದವ ಪ್ರಾಜ್ಞ, ಇದನಳೆದವನೆ ಮುಕ್ತ.
ಇಲ್ಲದವ ನೃಪನಿದ್ದರೂ ಅನಭಿಷಿಕ್ತ!"

"ನಭದ ಮಧ್ಯದಿ ನೋಡು ಅಮರ ಹಾಸಿಗೆ ಹಾಸಿ
ಪವಡಿಸಿರುವಳದಲ್ಲಿ ಮಂದಾಕಿನಿ
ನಗ್ನ ಸೌಂದರ್ಯದಲಿ ಮುಗಿಲಹೂವಿನ ಮೇಲೆ
ವಿಮಲ ಜ್ಯೋತಿಯದಾಗಿ ಸಮ್ಮೋಹಿನಿ!
ಮಾಂತ್ರಿಕನ ರತ್ನಗಂಬಳಿಯಂತೆ ಸರಿಯುವದು
ಮೆಲ್ಲಮೆಲ್ಲನೆ ಇವಳ ಹಂಸತಲ್ಪ.
ಇವಳನಂತಾನಂತದೊಂದು ವಿದ್ಯುಲ್ಲತೆಯ
ಕುಸುಮವರಳಲು ಬೇಕು ಒಂದು ಕಲ್ಪ.
ಆದಿಮಾಯೆಯದಾಗುತೊಮ್ಮೆ ಕಂಗೊಳಿಸುವಳು
ಚಂದ್ರಮೌಳಿಯ ಜಟಾಜೂಟದಲ್ಲಿ;
ಕಣ್ಣು ಮುಚ್ಚಾಲೆಯಾಡುತ ವಿಹರಿಸುವಳಿವಳು
ಮೆರತು ತನ್ನನೆ ತನ್ನ ಮಾಟದಲ್ಲಿ.
ಆ ತೇಜ, ಸಂಯಮ, ವಿಲಾಸ, ನಿರ್ಭರತೆಗಳು!
ಅಲ್ಪದರೊಳಾ ಭೂಮವರಳ್ವ ಸರಣಿ!
ವ್ಯಕ್ತದಿಂದವ್ಯಕ್ತವನು ಧ್ವನಿಸುತಿಹ ರೂಪ,–
ಮೂಡಲಿಹ ವಿಶ್ವಗಳ ಮಧುರವಾಣಿ!
ವಿದ್ಯುತ್‌ಕಣದ ರಾಶಿಯನೆ ಹಾಸುತೊರಗಿಹಳು
ಒಂದೊಂದು ವಿಶ್ವವಹುದೊಂದೊಂದು ಕಣವು;
ಸ್ವಯಂಜ್ಯೋತಿಶಯ್ಯೆಯಲಿ ನಿರ್ಜರಾಂಗನೆಯೊರಗಿ
ಬರುವ ವಿಕಸನಕಿತ್ತ ಒಲವಿನೌತಣವು!"

ಇಲ್ಲಿ ಗೆರೆಯೆಳೆಯುವದು ಮರ್ತ್ಯಪ್ರಜ್ಞೆಯ ಸೀಮೆ–
ಒಳಗಣ್ಣು ಹೊರಗಣ್ಣು ಬೆರೆತು ನೋಡಿದ ನೋಟ
ಮುಗಿಯಿತಿಲ್ಲಿಗೆ. ಜ್ಞಾನದಾಯಿನಿಯು ಸುರಗಂಗೆ

ತೋರುವಳೆನಲು ಮುಂದೆ ಬಹ ದಾರಿಗಳ ಕೂಟ,
ಬೆಳಕೆ ಕತ್ತಲೆಯಿಹುದು. ಬೆಳಕುಮೋಡದವದಾಗಿ
ಆಕಾಶಗಂಗೆ ಕವಿಯುವಳೆಮ್ಮ ಕಂಗಳನು.
"ಹಿರಣ್ಮಯೇನ ಪಾತ್ರೇಣ ಸತ್ಯಸ್ಯಾಪಿಹಿತಂ ಮುಖಂ
ತತ್‌ತ್ವಂ ಪೂಷನ್ ಅಪಾವೃಣು ಸತ್ಯಧರ್ಮಾಯ ದ್ರಷ್ಟಯೇ"
ಗಂಗೆಯಾಚೆಯ ಸೊತ್ತು ಘನರಹಸ್ಯಾಗಾರ.
ಇದ್ದವೊಲು ಮುಂಬರಿಯೆ,– ಮಾರ್ಮಲೆವ ಮಂಗಳನು!
ಅರೆಬಿಚ್ಚಿದಂಥ ಹಣೆಗಣ್ಣನರಳಿಸು. ತೆರೆದ
ನಿನ್ನ ಹೃದಯಾಕ್ಷಿಗಂದೆಲ್ಲ ಗೋಚರವಾಯ್ತು
ಬರಿ ನಿನ್ನ ಹೃದ್ದೇಶ, ಮನದ ಪ್ರಾಂಗಣ, ಜೀವ–
ಪ್ರಣತಿ ನಂದಾದೀಪ, ನಿನಗೆ ಹಿಗ್ಗಾಯ್ತು!

ಹಣೆಗಣ್ಣದೀಕ್ಷಿಸಲು ಸೂಕ್ಷ್ಮಲೋಕದ ಪರಿಯ,
ಮೂರ್ಧ್ನನೇತ್ರಕೆ ವಿದಿತವೀ ವಿರಾಟತೆಯ ಸಿರಿ,
ಸ್ವರ್‌ಗಂಗೆಯಾಚೆಗಿಹ ವಿಸ್ತಾರ; ಕಾಣದನು.
ಅಂದು ತೆರೆವುದು ಭಾಗ್ಯ. ನಿನ್ನದಾಗುವದು ಗುರಿ.
ಆದಿಶಕ್ತಿಯು ಬಹಳು ನೆಲ–ಮುಗಿಲ ಹೊಂದಿಸುತ.
ಅಂದು ನಿನಗಾಗುವದು ಜಗವೆ ಜ್ಯೋತಿರ್ಲಿಂಗ;
ಕುಸುಮ–ತಾರಾಲೋಕ; ಮಣ್ಣ ಕಣ–ಸುರಗಣ;
ಬೆಳಕು ತುಂಬುತ ತುಳುಕಿ ನಿನ್ನ ಸರ್ವಾಂಗ!
ಏಳು, ಆರಾಧಿಸು.
ಏಳು, ಸಂಶೋಧಿಸು.
ಇಲ್ಲದಿರೆ, ರೋದಿಸು!"

ಮುಗಿಲೊಳೊಂದೊಂದಾಗಿ ಮುಗಿಯೆ ತಾರಾಕುಸುಮ,
ಕ್ಷಿತಿಜದಾಚೆಗೆ ಸರಿಯೆ ಅಮರಾಪಗೆಯ ಸರಿತ,
ನಸುಕು ಕುಡಿಯೊಡೆಯುತಿರೆ ನಭದ ನಂದನದಲ್ಲಿ,
ಉದಯದುಲಿವಿಂದಿರಲು ಇಳೆಯು ಸಂಪೂರಿತ,–
ಮೆಲ್ಲಮೆಲ್ಲನೆ ತೇಲಿ ಗರುಡಪಕ್ಷಿ
ನೋಡುತಿರಲಿಕ್ಕು,– ಸಾಗಿತ್ತು ಮರೆಗೆ.
ಅದರ ಮೇಲ್ ಕುಳಿತಿರುವ ಭಾಸುರೇಂದ್ರ
ಮತ್ತೆಂದು ಮರಳುವನೊ ನಮ್ಮ ಧರೆಗೆ?
ಕೈಲಾಸ ಶಿಖರದಿಂದೇಳ್ವ ಕರೆಗೆ?

ಕೈಮುಗಿದನಿಕ್ಷು ತಾನುತ್ಪಲವು ಮುಗಿಯುವಂತೆ.
ಕಣ್ದೆರೆದ,– ತಂಗೊಳದಿ ತಾವರೆಗಳರಳುವಂತೆ.

ಆಗ ಬೆಳ್ಳಗಾಗಿತ್ತು;
ಬೆಳ್ಳ ಬೆಳಗಾಗಿತ್ತು–
ಎಲ್ಲ ತಲೆಕೆಳಗಾಗಿ
ನನಸು ಕನಸಾಗಿತ್ತು;
ಕನಸು ನನಸಾಗಿತ್ತು.
ಇದ್ದಂತೆ ಇದ್ದಿತವನಾ ಕುಟೀರ.
ಕಮಂಡಲು, ದಂಡ, ಇದ್ದಂತೆ ತೀರ!
ಆದರದಿ ತುಂಬಿತ್ತು ಮುಗಿಯದ್ಯೆಸಿರಿಯು;
ಹರಿಯೆ ಸನಿಯದಿ ವಿಶ್ವಪ್ರಭೆಯ ಝುರಿಯು.

❖❖

೧೦

ರಾಗರತಿಯ ಸೋಪಾನ-
ದಿಂದ ಭೋಗಹರ್ಮ್ಯಕೇರಿ,
ಭೋಗಡಿಂದ ನಿರ್ಲಿಪ್ತರ
ಗುಮ್ಮಟವನು ಸೇರಿ,
ಯೋಗಯಾನದಿಂದ ಮುಗಿಲ
ಮುಗಿಯದಿರುವನಂತರದಲ್ಲಿ
ಸಾಗಿ ವಿಮಲ ಜ್ಯೋತಿಯಾಗಿ
ನಿನ್ನ ಹಂತದಲ್ಲಿ,-
ನೀರದದೊಲು ತೇಲಿ ಬಾ,
ನಿರ್ವಯಲನೆ ಅಳೆದು ಬಾ,
ತ್ರಿಭುವನಗಳ ಸಖನೆ ಬಾ,
ಬಾ, ಬಾ, ಬಾ!

ಶುದ್ಧ, ವರ್ಣರಹಿತ, ನಿತ್ಯ
ಚೇತನಾಪುರುಷನಾಗಿ
ಮುಗ್ಧ ಬಾಲನಂಥ ಬಾಳಿ-
ನಿಂದತೀವ ಹರುಷವಾಗಿ
ಏಕಮೇವ ದರ್ಶನದಾ
ದೃಷ್ಟಿದೋಷ ಸೋಂಕದೆ,
ಸ್ವಗತತೃಪ್ತಲೀಲೆ ಭುವನ-
ದೈಸಿರಿಯನು ನೂಂಕದೆ,
ವಿಶ್ವದ ದಿವ್ಯತೆಯ ಕಂಡು
ಘನಮನ ಪ್ರಜ್ಞೆಯನು ಮುಡಿದು
ನವಮನುಕುಲವಿಕಸನದಾ

ಮೂಲಮಂತ್ರಗಳನು ಪಡೆದು
ಭೂಲೋಕವೆ ದೇವಲೋಕ-
ವಿಹ ದಾರಿಯ ಸುಳಿವ ಹಿಡಿದು,-
ನೀರದದೊಲು ವರ್ಷಿಸ ಬಾ.
ನಾರದನೊಲು ಹರ್ಷಿಸ ಬಾ,
ಸಕಲರನಾಕರ್ಷಿಸ ಬಾ,
ಬಾ, ಬಾ, ಬಾ!

❖ ❖

ಇಳಾಗೀತ

೧

ಶೈಲಾಗ್ರಗಳ ಶೈಲಿ;
ಗಿರಿಕಂದರದ ಛಂದ:
ತಿಳಿಯುವಿಯಾ ಇಳೆಯೊರೆದ ಸುಭಗ ಕೃತಿಯ?
ನದಿ-ನದದ ನವರಸವ,
ತರುಲತೆಯಲಂಕಾರ:
ಅನುಭವಿಸುವಿಯಾ ಕೃತಿಯ? ಧ್ವನಿಯ? ಶ್ರುತಿಯ?

ಅಲುಗಲಂತಃಕರಣ
ಕೃತಿಯ ಚರಣವನೊಂದು
ಸವಿದು ಸಂತಸಪಡುವ ಬಯಕೆಯಿಂದ,-
ಸಹ್ಯಾದ್ರಿ ಶೃಂಗವ-
ನ್ನೇರುತ ಸಮಾಧಿಸ್ಥ-
ನಾಗಿ ಕಾಂಬುದು ತೆರೆವ ದೃಶ್ಯದಂದ!

ಭೂದೇವಿಯೊರೆದೊಂದು
ಭಾವಗೀತದ ಚೆಲುವ
ತಿಳಿವ ಮನವಿರೆ,- ವಿಹಗದಂತೆ ನೆಗೆದು
ವಾಯುವೇಗದಿ ನಭವ-
ನಳೆಯುವ ವಿಮಾನದಲಿ
ಕುಳಿತು ನೋಡಿಳೆಯೆಡೆಗೆ ದೃಷ್ಟಿಯೊಗೆದು!

ಅವಳ ಹಿರಿಗಬ್ಬವನೆ
ತಿಳಿವ ಹಿರಿಯಾಸೆಯಿರೆ
ಸುತ್ತಿ ಬಾ ಭೂಚಕ್ರ-ಎದೆಯ ತೆರೆದು
ಪುಷ್ಪಕ ವಿಮಾನದಲಿ
ಕುಳಿತು ಕಂಣತಳಿಸುತ:
ಆಗ ನಲಿಯುವಿ ವಿಶ್ವದೊಡನೆ ಬೆರೆದು!

೨

ಗಾಳಿಗಡಲಲಿ ನನ್ನ ಗಾಳಿದೋಣಿಯ ನಾನು
ನೂಗಿದೆನು ಮುಂದೆ, ಮುಂದೆ!
ತೂಗಿದೆನು ಮೇಲೆ, ಮೇಲೆ!
ಘನಫೇನಸಾಗರ ತರಂಗೋತ್ತರಂಗಿಸುತ
ಅಪ್ಪಳಿಸುತಿವೆ ಬಂದು ಮೇಘಮಾಲೆ!
ಬಿಳಿಮುಗಿಲ ಕಡಲುಗಳು ಮಂಥಿಸುತ ಮುಂಬರಿಯೆ
ಚಿಮ್ಮುತಿಹುದೆಲ್ಲೆಡೆಗೆ ಮಂಜುಬುರುಗು!
ಬಿಳಿರೇಶಿಮೆಯ ನಯದ ಅಚ್ಚಗಳ ತೂರಾಡಿ
ಮೇಘ ಸೀಕರವಾಗುತೊಳಗು ಹೊರಗು!
ಒಮ್ಮೊಮ್ಮೆ ಮಂಜುಗಡಲೊಳು ಮುಳುಂಗುತ ಸಾಗಿ
ವಿಮಾನ ಸಬ್‌ಮರೀನುಗಳ ಮೆರುಗು!

ಮೆಲ್ಲಮೆಲ್ಲನೆ ಮೇಲೆ ತೇಲಿತ್ತು ಸೂರ್ಯಬಿಂಬ
ಮಂಜಿನೆಳೆಜವನಿಕೆಯದಾಗಿತ್ತು ಕೆಂಪು ತುಂಬ!
ಪೂರ್ವದಿಗ್ವಲಯವನು ಸ್ಪರ್ಶಿಸಿರಲು
ಮಂಜುಗಡಲಿನ ತರಂಗ,–
ಭೂಗೋಲ ಹಾಯಾಗಿ ತುಸು ಗೋಚರ:
ಅಲ್ಲಲ್ಲಿ ಕಾಡಿಗೆಯ
ರೇಖೆಗಳ ಶಾಖೆಗಳ
ಮಸುಕು ಎಸಕ
ಅಂದ ಚೆಂದ
ಶೃಂಗಗಳ ಚೇತರಿಸಿ ತಲೆಯೆತ್ತಿದೆ
ಆ ಚಿರಂತನ ರಜನಿಜಲಧಿಯೊಳಗಿಂದ!
ಕಡಲಾದ ಮಂಜು ನದಿಯಾಗಿ ಹರಿದು

ತುಂಬಿತ್ತು ದರಿಕಂದರಗಳೊಡಲನು
ಮಾಂತ್ರಿಕನ ಮುಂದೆ ಮೈಗರೆಯುವಂತೆಲ್ಲ ಮರಳು,–
ತಾಗಿದೊಡೆ ರವಿಯ ಬೆರಳು!
ಮಂಜು ಸರಿಯಲು ಬೆಳ್ಳಿ ಹಳ್ಳ ಹರಿಯುವ ಹೊಂಚು,–
ಅದಕಚ್ಚಹಸಿರಿನಂಚು!
ಮೇಲಮೇಲಕೆ ಮತ್ತೆ ವಾಯುವೀಥಿಯಲಿ:
ಮೇಘಲೋಕದ ಮೇಲೆ ಗಂಧರ್ವಲೋಕ!
ಅಜೇಯ ಆ ಗೆಲುವು
ಅನುಪಮವು ಚೆಲುವು
ಲಾವಣ್ಯದೆದುರು ನಾನಾದೆ ಮೂಕ!

ಇಲ್ಲಿಯೂ ಕಿರಿಮುಗಿಲ್ಗಳಲ್ಲಲ್ಲಿ ತೇಲಾಡಿವೆ:
ಮೋಡದಾನೆಯ ಮರಿಗಳಲ್ಲಲ್ಲಿ ಮೇದು
ತಪ್ಪಲಿನ ಬಯಲಿನಲ್ಲಿ
ಸ್ವಚ್ಛಂದ ಬಯಲಿನಲ್ಲಿ
ಸ್ವಚ್ಛಂದ ಸುಖವಸ್ತು ಮನವಂದು ಓಲಾಡಿವೆ,–
ಮುಗಿಲ ಗೂಳಿಗಳು!
ಮೇಘದ್ವಾರಗಳಲ್ಲಿ ಮೇಘಸುಮಗಳ ಮಾಟ
ಲಾಸ್ಯಕೇಳಿಗಳು!

ಇಲ್ಲಿದೋ! ಗಂಧರ್ವಲೋಕಕಿಹ ಮುಗಿಲುಗಾಡಿ!
ಓಡುತಿದೆ ರೈಲಿಲ್ಲದೆ!
ಅದಕೆ ನಿಲ್ಮನೆಯಿಲ್ಲ:
ನಿಯಂತ್ರಕನಿಲ್ಲ;
ಹಿಂದಿಲ್ಲ, ಮುಂದಿಲ್ಲ;
ಎತ್ತ ಮನಬಂದತ್ತ,
ಗಾಂಧರ್ವ ಲಹರಿಯದು ಚಿತ್ತವನು ಸೆಳೆದತ್ತ
ಸಾಗುತಿದೆ ಸದ್ದಿಲ್ಲದೆ!

ಅಲ್ಲೊಂದು ಸಾಗಿಹುದು ಬಿಳಿಮುಗಿಲ ಕಾರವಾನ.
ತಡೆಹಾಯ್ದಿತದನು ಮುಂಬರಿದು ನನ್ನೀ ವಿಮಾನ:

ಓಡಿತ್ತು ಸಲಗ,
ಓಡಿತ್ತು ಹೆಂಣಾನೆ,
ಓಡಿದವು ಬೆದರಿ ಚಿಟ್ಟಾನೆಯಾ ಮರಿಗಳೆಲ್ಲ;
ಎಂಥ ಉಡ್ಡಾಣ!

ಗಾಳಿಗಡಲಲಿ ನನ್ನ ಗಾಳಿದೋಣಿಯ ನಾನು
ನೂಗಿದೆನು ಮುಂದೆ ಮುಂದೆ!
ತೂಗಿದೆನು ಮೇಲೆ, ಮೇಲೆ!

❖❖

೩

ಅಲ್ಲದೋ ಮುನ್ನೀರು
ಅದರೊಳಗೆ ಚಾಚಿಹುದು ಭೂಮಿ ತಾ ಕೂರ್ಮದಂತೆ!

ಎಣ್ಣೆ ಕಾಗದದಲ್ಲಿ ಸೂಕ್ಷ್ಮ ವರ್ತುಲ ಮಾಡಿ
ತುಂಬ ಸುಳಿಸುಳಿಯಾಗಿ ಏರುವಂತೆ,
ಗೊಮ್ಮಟೇಶ್ವರರಾಯನುತ್ತಮಾಂಗದ ಮೇಲೆ
ಸುಳಿಯ ಗುಂಗುರಗೂದಲೆಂತೊ ಅಂತೆ
ಕಡಲು ಕಂಗೊಳಿಸಿರುವದೆಲರೊಡೆನೆ ತಿಳ್ಳಿಯಾಡಿ!

ಮಂಜಿನ ತೆರೆಮರೆಗಳಲಿ–ಶ್ಯಾಮ ನೀಲಿಮತೆ
ವಾರಿ–ನಿಧಿ–ಯಿಂದ ಅಕೋ ಮೇಲಕೆದ್ದು
ಕಚ್ಚುತಿದೆ ಮುಗಿಲ ತಿಳಿನೀಲಿಗಳನು.
ಆ ನೀಲ ಸಲಿಲದಲಿ ಕೊರೆದು ನಾರಂಗಿಪಥ
ದಿನಕರನು ನಡೆಯಿಸುವ ದಿನದಿನದ ಅವನ ರಥ:
ಕಿರಣಗಳು ಕೀಲಿಸಿವೆ ಗಾಲಿಗಳನು!

ಬಂದಳಿದೊ ಪೃಥ್ವಿ ಮಂಜಿನ ಮುಸುಕಿನಲ್ಲಿ:
ಎತ್ತಿದಳು ಜವನಿಕೆಯ, ರವಿ ಬರಲು ಮಂಜುಗಳ ಮಂದಸ್ಮಿತೇ!
ರವಿಯ ಬಿಜಯಂಗೆಯ್ಯಲೆಂದವಳು ನಸುಕಿನಲ್ಲಿ
ತವಕಿಸಿದಳವನ ಬರವಿಂದಾಗಿ ಚಿರವಿಸ್ಮಿತೆ!
ಇಳೆಯ ಇಳಕಲ್ಲು ಸೀರೆ!
ಕಸೂತಿಯಾ ಬೆಡಗು ಬೇರೆ!
ಹೊನ್ನುಡುಪನುಟ್ಟ ನೀರೇ!
ಏನವಳ ಬಿತ್ತರದ ಚೆಲುವು!
ಮುಪ್ಪಿರದ ಒಲವು!
ಇದು ಹವಳ
ಇದು ನಿವಳ.

ಮತ್ಸ್ಯಾವತಾರಸಮಯದಲಿ ಆಳಿದವಳು
ಹೆಮ್ಮೀನ-ಹೆಮ್ಮೊಸಳೆಯೊಲು ಬೆಳೆದುಕೊಂಡು.
ಕೂರ್ಮಾವತಾರಕಾಲದಲಿ ಬಾಳಿದಳಿವಳು
ಆಮೆಯೊಲು ಮೆಯ್ಯನೊಳಗೆಳೆದುಕೊಂಡು.
ವರಾಹಾವತಾರಕಾಲದಲಿ ತಾಳಿದಳಿವಳು
ಮೃಗದ ಕೋರೆಯ ಮೇಲಕುಳಿದುಕೊಂಡು.
ನರಸಿಂಹ ಬರಲೀಕೆ ಭೂದೇವಿ. ನೋಡಿದೋ!
ಪವಡಿಸಿಹಳವಳಿಂದಿಗೂ- ಶೇಷನಿರ್ಪಂತೆ,
ಸರಿಯದಿಹ ಸರ್ಪದಂತೆ!

ಮಳಲುದಿನ್ನೆಗಳೆಲ್ಲ ಕೂಡಿ ನಿಂತಿಹವಿಲ್ಲಿ
ರ್ಹಿನೋಸ್ವದ ಗುಂಪಿನಂತೆ,
ದಿಗ್ಗಜಸಮೂಹದಂತೆ!
ಪ್ರಳಯಕಾಲದಿ ನುಗ್ಗಿ ಸರಿದ ಕಡಲು
ಹಿಡಿಸಲಾರದೆ ಮಡಿಲು
ಕೈ ಬಿಡಿಲು
ಸಾಲು ಸಾಲಾಗಿಲ್ಲಿ
ಸಂಧಿಸಿದ ನಕ್ರಸಂದೋಹದಂತೆ!
ಮಂಜುಗಡಲೊಳು ಬೆಟ್ಟ ತುಸುವೆ ತಲೆಯೆತ್ತಿ
ಅವಿತು ರಾಕ್ಷಸಗಪ್ಪೆಯೊಲು ಘೂರ್ಣಿಸಿಹವು;
ಕೆಸರಿನಲಿ ಕಾಡೆಮ್ಮೆ ಮೋರೆಯೆತ್ತಿದೊಲು
ಎತ್ತಿ ನಸುಕಿನ ಪ್ರಭೆಯ ಜೀರ್ಣಿಸಿಹವು.

ಘಟಸರ್ಪವ್ಯೂಹದೊಳು ನುಸುಳಿದಂತೆ
ಪೊಳ್ಳುಗಳು ಹೊದರುಗಳನೊಳಸುತ್ತಿವೆ.
ಇರುಳುಬಂಣದ ಕೊಳ್ಳಗಳಲಿ ಹುದುಗಿ
ಬೂದಿಬಂಣದ ಚರ್ಮಗಳನು ಹೊದ್ದು
ಅರ್ಧಚಂದ್ರಾಕೃತಿಯ ಒತ್ತಿನಲ್ಲಿ
ತೆರವಾದ ಕಡಲ ಬಯಲೊಳು ಮೇಲಕೆದ್ದು
ತಿಮಿಂಗಿಲಗಳಿದೊ ತಲೆಯೆತ್ತಿವೆ!
ನಿಂತವೊಲು ನಿಂತಲ್ಲಿಯೇ ಸತ್ತಿವೆ!
ಜ್ವಾಲಾಮುಖಿಯ ರುದ್ರ ವರ್ತುಲಗಳು
ಒಂದೊಂದೆ ಮುಂದಲೆಗಳಲ್ಲೊತ್ತಿವೆ!

❖ ❖

೪

ಕಡಲಿನೊಳಗಿಂದ ಸಿಡಿದೆದ್ದ ಭೂಗೋಲವನು
ನೀರು ಹಣಿಸುತ ವರುಣ ತಾನು ತಣಿಸಿದನು.
ವಿವಿಧ ನದಿ-ನದಗಳನು, ಬುಗ್ಗೆ ಕಾಳ್ಬುರಗಳನು
ನಾಗಮಣಿತದ ಮೋಡಿಯಲ್ಲಿ ಮಣಿಸಿದನು!

ಕಂದಿನೆಲವನು ನಾಗಮಣಿತದಲಿ ಕೊರೆದು
ಬಿಸಿಲಿನಲಿ ಹೊನ್‌ಕಣದ ಮಳಲುಹೊಳೆಯು
ನಿರ್ಜೀವನವೆ ಪ್ರವಹಿಸುವ ರೀತಿಯಲ್ಲಿ
ಕ್ಷಿತಿಜಗಳ ಕಾಡಿಸಿದೆ; ಹತ್ತದೆಳೆಯು!

ಹನಿಯ ಮುಂದೊಂದು ಹನಿ ಹನಿಸಿ ಹರಿದು
ಮಳೆಹುಳದ ಗಾತ್ರದಂತೊಂದು ಕಿರಿಹೊನಲು
ಸಾಗಿಹುದು ಪರಿಘಸೀಮೆಯನು ದಾಟಿ:
ಕ್ಷೀಣವಾದರು ಹಿಂಗಿತದರ ಕನಲು!

ಅರ್ಧಚಂದ್ರವದಾಗಿ ಮಳೆಬಿಲ್ಲಿನಂತೆ
ಹೊಳೆಯದಿನ್ನೊಂದಿಲ್ಲಿ ಹರಿಯುತಿಹುದು.
ನಾಗಕನ್ನೆಯ ಹುಲ್ಲುಗಾವುಲದೊಲು
ಸುತ್ತೆಲ್ಲ ನೆಲ ಹಸಿರು ಮುರಿಯುತಿಹುದು.

ಮತ್ತನೇಕಾನೇಕ ನದಿನದಗಳು,-
ನೀರುಹಾವುಗಳಂತೆ ನೂರು ಮಣಿತ!
ಸೇರುತಗಲುತ ಮತ್ತೆ ಬೆರೆಯುತಿಹವು,-
ರೈಲಿನೋಪಾದಿಯಲಿ ಡೊಂಕುಗಣಿತ!

ಹೊಂಗಟ್ಟಿನೊಳಗೆ ರಜಪೂತ ರಮಣೀಯರು
ಹೊಂದಿಸಿದ ರನ್ನಗನ್ನಡಿಯೊಲೆಸೆದು
ಬೆಟ್ಟ-ಹೊದರುಗಳಲ್ಲಿ ಸಿಕ್ಕಿಕೊಂಡು
ಹಸಿರ್, ಹಳದಿ, ತಿಳಿನೀಲಿಯಾಗುತೊಸೆದು
ಮುಗಿಲ ದರ್ಪಣಿಸಿಹವು ತಂಗೊಳಗಳು:
ತ್ರಿಕೋನ, ಚೌಕೋನ, ವರ್ತುಲಗಳು!

ನಭೋಂಗಣದೊಳಂಡಲೆವ ನೀರದಗಳು
ಬಳಿಸಾರುತಿವೆ ತಮ್ಮ ನೆಳಲು ಚಾಚಿ:
ಹೊಲಕೊಮ್ಮೆ ನೆಲಕೊಮ್ಮೆ ಹೊದ್ದಿಸಿಹ ಛಾಯೆ
ತಿರುಗುತಿಹೆ ತಮ್ಮಂತೆ,- ನೋಡಿ, ನಾಚಿ.

ಬಿಸಿಲಿನಲಿ ನೀರಡಿಸಿ, ಕೊಳಗಳೆಡೆಗೆ
ಅಡಿಯಿಡುವ ಸಂಣ ದನಕರುಗಳಂತೆ
ಮೇಘಶ್ಯಾಮಲ ಛಾಯೆ ಚದುರುತಲ್ಲಲ್ಲಿ
ಹೊಟ್ಟೆ ಹೊಸೆದಿವೆ ದಂಡೆಬೆಟ್ಟಗಳ ಬದಿಗೆ!

ಅಚ್ಚರಿ! ಸ್ವಯಂಪೂರ್ಣ-ನೀರದದ ನಿಧಿಯು.
ಪ್ರತಿಬಿಂಬವನು ಕಾಡಿತಾವ ವಿಧಿಯು?
ಬೆಳಕಿನಾ ನೆರಳಾದರೂ,- ಅಹುದು ನೆಳಲು.
ನೆಳಲುಬಾಳನು ತೊರೆಯದೆಂದಿಗೂ ಅಳಲು.

❖ ❖

೫

ವರುಣರೆಲ್ಲರು ನಡೆದರತ್ತ ತಪತಪನೆ ತೋಯ್ದು;
ನೀರುಗೆರೆಯಂತೆ ನೆಲದಂತಸ್ತುಗಳನು ಹಾಯ್ದು.
ಬಂದರೀಗ ಮರುತರು:
ನಿತ್ಯಕಾರ್ಯನಿರತರು!
ಊದುತಿರುವ ಗಾಳಿಗಳು,
ನಂದನಗಳ ಮಾಳೀಗಳು!
ಬಂದರಿದೋ ಬೀಸುತಿಹರು ಸೌಗಂಧವಾರಣರು;
ನವನಿರ್ಮಿತಿ ನವಭೂಮಿತಿಗಿರುವ ಮೂಲಕಾರಣರು!

ಸಹ್ಯಾದ್ರಿಯ ಬೀಡಿನಲ್ಲಿ ಇವರಗಾಧ ಶಿಲ್ಪ
ಅರಳಲೆಂದು ಉರುಳಿರಬಹುದೇನೊ ಏಸೊ ಕಲ್ಪ?
ರೆಕ್ಕೆ ಬೀಸಿ ಬಂದ ವಾಯು:
ಮರಣರಹಿತನೀ ಜಟಾಯು!
ವಜ್ರಶಿಲಾಪರ್ವತವನು ಕೊರೆದಿದಾವ ಸಾಧನೆ?
ಇಂದ್ರಾಯುಧ ಸಾಣೆಹಿಡಿದ ಸೌಧಗಳಾರಾಧನೆ?
ಯಾವ ಗಗನಮಹಲು?
ಯಾವ ದೇವಮಂದಿರ?
ಸೂರ್ಯ! ಹೇಳಲಾರೆಯ?
ಹೇಳಬಾರೊ ಚಂದಿರ!

ಯಾವ ವೃಷಭದೇವಗೆಂದು ಯಾವ ವಿಶ್ವಕರ್ಮನು
ಭವ್ಯಭವನವಿದನು ಯೋಚಿಸಿದನುದಾರಧರ್ಮನು?
ಸಾವಿರ ಕಂಬಗಳೆದ್ದಿವೆ:
ಬೆಟ್ಟವೆ ತಲೆದಿಂಬಾಗಿ
ರಾಜವೈಭವದಿ ಬಿದ್ದಿವೆ
ಸಾಲುಗೊಳ್ಳುತಿಂಬಾಗಿ!

ನೂರು ಕಂಬಗಳ ಕರಗಿಸಿ ಮಾಡಿದೊಂದು ಸ್ತಂಭ!
ಝುಕ್ಕಿಸಿತಿದರೆದುರಿಗೆಲ್ಲ ಜಕ್ಕಣ್ಣರ ಜಂಭ!

ಇಳಿದಿದೆ ಕಿರುಮಂಜಿನ ತೆರೆ:
ಊರ್ವಸಿಯದೆ ನರ್ತನ?
ತಪ್ಪಲೆಲ್ಲ ರಂಗಸಾಲೆ:
ನಾರದನದೆ ಕೀರ್ತನ?
ಪಾರ್ಶ್ವಗಳಲಿ ಪಂಚವರ್ಣ:
ಗಂಧರ್ವರ ಚಿತ್ರಣ?
ಅರ್ಧಕೆ ನಿರ್ಮಿತಿಯ ತ್ಯಜಿಸಿ ಮರುತರೆಲ್ಲಿ ನೆಗೆದರು?
ಮತ್ತದಾವ ಯುಗದಿ ಮುಂದುವರಿಸಲೆಂದು ಬಗೆದರು?

ಬಾಲಮರುತರಿದೊ ರಚಿಸಿರುವಾಟಿಗೆದಿನ್ನೆಗಳು!
ಗುಬ್ಬಚ್ಚಿಯ ಗೂಡುಗಳು!
ತಪ್ಪಲು ಕರುಮಾಡಗಳು!
ಕೋರೈಸುವ ಡೊಂಕುಗಳು!
ಶೃಂಗಗಳಿದೊ ಶಂಖಗಳು!
ಸಹ್ಯಾದ್ರಿಯ ತೊಡೆಯನೇರುತಮರರಾಡಿದಾಟ!
ಸೌಂದರದೊಳು ಮುಳುಗೇಳುವ ಮರಿಮರುತರ ಮಾಟ!

❖ ❖

೬

ಮೃತ್ಯುಲೋಕವೆನುವೆ ವಿಳೆಯ.
ಮಾನವನೇ ಇಲ್ಲ!
ಸೃಷ್ಟಿಯುದಯದಾದಿಯಂತೆ
ತೋರುತಿರುವದೆಲ್ಲ!
ಪ್ರಾಣಿಯಿಲ್ಲ; ಪಕ್ಷಿಯಿಲ್ಲ! ಕ್ರಿಮಿಕೀಟಕವಿಲ್ಲ!
ಮನೋಮಯದ ರಾಗವಿರಾಗದ ಮಾದಕವಿಲ್ಲ!
ಶಾಂತಳು, ಸುಂದರಳು, ಧ್ಯಾನಮಗ್ನಳಿವಳು ಮೇದಿನಿ:
ಮೌನಯೋಗಿನಿಯು ಸ್ವಪ್ನಜೀವಿ, ಆಹ್ಲಾದಿನಿ!

ಮೌನವಿದನು ಕದಡಿ ಬಂದ: ಮನುಜನಿಂದ ಧ್ವಂಸ!
ಬಗೆದು,– ಬುವಿಯ ಹೂಗೊಳದಲಿ ತಾನೆ ರಾಜಹಂಸ!
ಮನುಕುಲದೊಡನೆದ್ದಿತು
ಹೂಲಿ--ಧರೆಯನದ್ದಿತು
ಜ್ವಾಲಾಮುಖಿಮೇಖಲೆಯಲಿ; ಪ್ರಳಯಮಾನವಾಯಿತು–
ಪ್ರಕೃತಿಗುಣವು; ಧರಾಂಗನೆಗೆ ರಕ್ತಸ್ನಾನವಾಯಿತು.
ಹಿಂಸ್ರ ಮೃಗದ ಹಿಂಸೆಯೊಡನೆ
ಮನೋಮಯವು ಸೇರಿ
ಹಿಂಸೆಯಾಯ್ತು ಲಲಿತಕಲೆ!
ಕಂಸನ ಜಯಭೇರಿ!
ಎಲ್ಲಿ ಹೋದ ವಾಮನ?
ಕಾಂಬುದೆಲ್ಲಿ ರಾಮನ?
ಯಾದವಕುಲಸೋಮನ?
ಭೂದೇವಿಯ ಪುತ್ರರತ್ನ, ಕೊನೆಯ ಪ್ರಾಣಪದಕ,–
ಗೆಯ್ದನೇನು ತರುಣನಾಗಿ, ಆಗಿ ಹಂಣುಮುದುಕ?

ನರಕವಾಯ್ತೊ ಸ್ವರ್ಗವಾಯ್ತೊ
ಧರಣಿಯ ಪರಿವರ್ತನ?
ಬರಿ ಡಾಕಿನಿಯರ ನರ್ತನ,
ಭಯಗ್ರಸ್ತರಾರ್ತನ!
ಕೆಂಜಿಗಗಳು ಕಟ್ಟಿರುವೆಯ ಹುತ್ತಕಿಟ್ಟು ದಾಳಿ
ಲಗ್ಗೆ ಹಾಕಿದೊಲು ನುಗ್ಗುತ ಲಕ್ಷ ವರ್ಷ ಬಾಳಿ

ಎನಿತೊ ಯುದ್ಧಗಳನು ಹೂಡಿ
ನಗರಗಳನು ನಾಶಮಾಡಿ
ಸೆಗಣಿಯಲ್ಲಿ ಸೆಗಣಿಹುಳಗಳಂತೆ ಕದನವೆಸಗಿ
ಸೆಣಸಿದ ನರ ತನ್ನ ಕುಲದ ಕರುಳಗಳನೆ ಹಿಸುಕಿ.
ನೋಡುತಿವನ ನಕ್ಕ ರವಿಯು,
ನಕ್ಕ ಶಶಿ, ನಕ್ಕ ಕವಿಯು:
ನಕ್ಕವೆಲ್ಲ ತಾರೆಗಳವು ಬಿದ್ದು ಬಿದ್ದು ನಕ್ಕು.
ಖೊಕ್ಕೆಂದವು ದಶದಿಶೆಗಳು,– ಉಸಿರು ತೇಲಿ ಸಿಕ್ಕು.
ಮತ್ತಿವನವತಾರವಂತೆ!
ಮಹಿಮೆಯೂ ಅಪಾರವಂತೆ!
ಕೋಣವೆಂದಿತಂತೆ: ತನ್ನ
ಕುಲಕೆ ತಾನೆ ಯಮನ ಕೋಣ!

ದೇವದೇವನೂ ತ್ರಿ–ಕೋಣ!
ಕೋಣನ ಕಿಂ–ನರ–ಗೀತಕೆ
ಕಿಲಕಿಲನೇ ನಕ್ಕಿತು
ಕಾಲಪಕ್ಷಿ! ಕೊಬ್ಬಿ ಬೆಳೆದ
ನರನ ತಲೆಯ ಕುಕ್ಕಿತು!
ಎಲ್ಲಿರುವನು ಭೂಮಾತೆಯ ಪ್ರಾಣಪದಕ ಮಾನವ?
ಮರೆಹೊಕ್ಕನದಾವ ಗವಿಯ? ಆವ ಶಿಲಾಕೋನವ?

❖❖

೭

ಮಲಗಿರುವ ಮೊಸಳೆಗಳ ಬೆನ್ನುದುಪ್ಪಳದ ಮೇಲೆ
ಹೊನ್ನದಾರಿಗಳು
ಸ್ವರ್ಣರೇಖೆಗಳಂತೆ ಚಾಚಿಹವದೆಲ್ಲ ಕಡೆಗೆ:
ಇಲ್ಲ ಮೇರೆಗಳು.

ಕಾಲುದಾರಿಗಳೆಲ್ಲ ನಾಗಮುರಿಗೆ:
ಚಿತ್ರಾಕ್ಷರವ ಹೊಂದಿಸಿ–
ಪುರಾತನ ಲಿಪಿಯಲೇನನ್ನೊ ಬರೆಯುತಿಹವು
ವಿವಿಧ ತಾಣದಿ ಸಂದಿಸಿ.

ನಿರ್ಮಾಪಣದ ರಜ್ಜುವೊಲು ದಾರಿ ತೆರೆದಿರುವವು
ಇಳೆಯನಳೆಯುವೊಲು;
ಕೇಶರಾಶಿಯ ನಡುವೆ ಬೈತಲದ ರೇಖೆಯಂತೆ.
ಹೊನ್ನು ಹೊಳೆಯುವೊಲು.

ಯಾವ ನರಸಿಂಗನೋ! ಸಂಹರಿಸಿ ಸಿಂಹಗಳನು
ಗಿರಿಗಂಹ್ವರಗಳ ಸುತ್ತಿ
ಸೀಳ್ದಾರಿಗಳ ಕೊರೆದ ಶೃಂಗಗಳ ತುತ್ತ ತುದಿಗೆ.
ಕೋಡುಗಲ್ಲುಗಳ ಮುತ್ತಿ.

ಯಾವ ವಾಮನನೇನೊ! ವ್ಯಾಪಿಸುತ ಮರ್ತ್ಯವಿದನು
ನವಗ್ರಹದ ಪಥವ ತಿಳಿದು
ಮೆಟ್ಟಿ ಬಲಿಯನ್ನರಿತ ಪಾತಾಳಕಿಹ ಮಾರ್ಗವ:
ವಿರಾಟನಾಗಿ ಬೆಳೆದು.

ಉತ್ತರಾಪಥದಿಂದ ದಕ್ಷಿಣಾಪಥದ ತುದಿಗೆ
ಪರಿಕಿಸುತ ಪಂಥಾವನ
ರಾಮಾಭಿರಾಮನವನಿತಿಹಾಸವಾಗಿಸಿದನು
ತನ್ನ ಮಹಾಯಾನವ.
ಮೆದುಳಿನಿಮದ ಕೆಳಗಿಳಿದ ಸ್ನಾಯುವ್ಯೂಹ,
ಅದೆ ಕಣಿವೆಯ ದಾರಿ!
ಹಸಿರೆಡೆ ಮಣಿಯುತ ಟಿಸಿಲೊಡೆದಿದೆ ನೋಡು!
ನೂರೆಡೆ ಸೊಗ ಬೀರಿ!

ಬೂದಿ–ಹಳದಿ ಬಣ್ಣದ ನೆಲಗಳ ನಡುವೆ
ಉತ್ತಿದ ಶ್ಯಾಮಲ, ಬಿತ್ತಿದ ಹಸಿರು ಹೊಲ!
ಗಂಜಿಗಂಟಿಯೊಲು ನೆಲಕಂಟಿದ ವೃಕ್ಷ;
ನಳನಳಿಸುವ ದೃಶ್ಯದ ಚೆಲುವಿದು ಅಮಲ.

ಸುವರ್ಣಭೂಮಿವಿಸ್ತಾರಮಧ್ಯದಲ್ಲಿ
ಯಮುನೆಯಲ್ಲೊಗೆದು ತಂದ
ಗಿಳಿಹಸುರು ಬಣ್ಣದಾ ಸೀರೆಗಳನೊಣಗಲೆಂದು
ಗೋಪಿಯರು ಹಾಸಿದಂದ!

ಇಲ್ಲ ಗೋಪಿಯರಿಲ್ಲಿ. ಇಲ್ಲ, ಶ್ರೀಕೃಷ್ಣನಿಲ್ಲಿ!
ಓಡಿದರೊ ಎಲ್ಲಿಗೋಟ!
ದುಕೂಲಗಳು ಮಾತ್ರ ಬಿಸಿಲಿನಲಿ ಕಂಗೊಳಿಸಿವೆ:
ಬೃಂದಾವನದೀ ನೋಟ!

ಕೌರವಾಗ್ರಣಿ ದ್ಯೂತದಾಟವನ್ನಾಡಲೆಂದು
ಹಾಸಿದನು ಪಗಡೆಪಟ್ಟ.
ಹಿರಿ ಹುದ್ದರಿಗಳಿಲ್ಲ,– ಕೌರವರು ಪಾಂಡವರೆಲ್ಲ!
ಸುತ್ತುವರಿದಿಹುದು ಬೆಟ್ಟ!

ರತ್ನಗಂಬಳಿಗಳನು ಹಾಸಿ, ಪವನಗಳು ಬೀಸಿ,
ಸಭಾಪರ್ವಸನ್ನಾಹ!
ಮಂಡಿಸಿದಾಸನಗಳು ತೆರವೋ ತೆರವು.
ಎಲ್ಲಿದೆ ಶಕುನಿಯ ದಾಹ?

ಮರುಭೂಮಿಯ ನಡುವಣ ನಂದನದ್ವೀಪ:
ಅಲ್ಲಿಹುದಿದೊ ಗ್ರಾಮ.
ಅರ್ಧಚಂದ್ರದಂತಿಹ ಗಿರಿಯಡಿಯಲ್ಲಿ
ಶಾಕ್ಯಮುನಿಯ ವಿರಾಮ!

ಮಳಲುಬೆಟ್ಟವೊಂದರ ನಡುವಣ ಬಯಲು:
ಅಲ್ಲಿ ಹಳ್ಳಿಯೊಂದು.
ಔದುಂಬರಫಲದಂತೆದೆ ತೆರೆದಿಹುದು
ಕಾಲಪಕ್ಷಿಗೆಂದು!

ಮುಗಿಯದ ಮಾಣದ ಬಟ್ಟ ಬಯಲಿನಲ್ಲಿ
ಮಾಳಿಗೆಗಳ ಹೊಗೆಯು
ಪಸರಿಸಿತೊಂದೆಡೆ ಮೋಡವಾಗಿ ತೇಲಿ!
ಇದೂ ಒಂದು ಬಗೆಯು:

ಭೀತ ಪಥಿಕರೊಂದೆಡೆ-ಕಾಡೊಳು ಸೇರಿ
ನಿಲ್ಲಲದೇ ಗ್ರಾಮ.
ನಾಗರಿಕತೆ ಕೊನರಿತು ತಲೆಯೆತ್ತಿ,
ಕಲೆಯಲು ಜನಸ್ತೋಮ.

ಸಮುದ್ರದೊತ್ತಿಗೆ ನಿಂತ ನೀರಿನಲ್ಲಿ
ಎನಿತೊ ಕಡಲುಹಕ್ಕಿ
ಬಿಳಿ ಚಿಟ್ಟೆಗಳೊಲು ಬರಿ ರೆಕ್ಕೆಗಳಾಗಿ
ಕೆಳಗುದುರಿದ ಪರಿ, ದಶಲಕ್ಷವ ಮಿಕ್ಕಿ,

ಉರಿಬಿಸಿಲಿಗೆ ಹೊಳೆಯುವ ಬೆಂಗಾಡಿನಲಿ
ಶ್ವೇತಭವನ-ಹರ್ಮ್ಯಗಳು ಗುಂಪುಗೊಂಡು
ಒತ್ತರಿಸಿವೆ ತಂಗೊಳದಡಿ ನೀರಡಿಸಿ,
ನಗರವೆಂದುಕೊಂಡು!

❖ ❖

೮

ರಿಬ್ಬನ್ನಿನ ರಸ್ತೆಯ ಸುಳಿವನು ಹಿಡಿದು
ಬಸ್ಸು–ಟ್ರಾಮುಗಳು.
ಎಡಬಲ ಗೊಂಬೆಯ ಮಹಡಿಯ ಮನೆ; ನಡುವೆ
ರಿಮಾಂಡು ಹೋಮುಗಳು.

ಕೋಣೆಗೊಂದು ಕಾಮಾರ್ಥದ ದಾಂಪತ್ಯ:
ಕಲಿಯ ಪಾರುಪತ್ಯ!
ಕಲಿ ತಾ ಹೂಡಿದ ಮೂರೆಲೆಯಾಟವಿದು:
ಗೊಂಬೆಯ ಬೇಟವಿದು!

ಅಲ್ಲಲ್ಲಿಗೆ ಮಿನುಮಿನುಗುತಿರುವ ದೀಪ:
ಹಸಿರು, ಹಳದಿ, ಕೆಂಪು.
ಸಾಲ್ಗೊಂಡಿವೆ,– ತೋರಣ, ಸೀಮಾರೇಖೆ!
ಗೊಂಬೆಗಂಬಗಳ ಗುಂಪು!

ಕರಿಹೊಗೆ ಪುಟಿಸುವ ಕಾರಂಜಿಗಳಂತೆ
ಫ್ಯಾಕ್ಟರಿಗಳ ಸಂತೆ!
ಕಲಿಯುಗದೊಳು ನರ ನಿರ್ಮಿಸಿರುವ ಪುರವು;
ಮುಂ–ಬ್ಯಾ ದೈತ್ಯನ ವರವು!

ರಬ್ಬರು ದಾರಿಯ ನೂರು ಕೂಟದಲ್ಲಿ
ರಬ್ಬರುಗೊಂಬೆಗಳಾಟ;
ರಬ್ಬರುಗಾಲಿಯ ಮೇಲೆ ನಿತ್ಯ ಭ್ರಮಣ;
ರಬ್ಬರುಸಂಸಾರದ ಸ್ಫೋಟ;
ರಬ್ಬರು ಕೋಗಿಲೆಗಳ ವಸಂತಮಾಸ:
ಓ ಎಂಥಾ ಮೋಸ!

ಇಂದಿನ ನಾಗರಿಕತೆಯಬ್ಬರ, ಹೊಯ್ದಾಟ,
ಬರಿ ರಬ್ಬರಿನಾಟ!

ದಣಿವನಾರಿಸಲು ಕೋಕಾಕೋಲ
ಹತ್ತಿಪ್ಪತ್ತು ಸಲ!
ಐಷಾರಾಮಿಗೆ ವಾಕ್ಪಟ ಚಿತ್ರ–
ಎಲ್ಲೂ ಇರದ ವಿಚಿತ್ರ!

ಊರ್ವಶಿ–ಮೇನಕೆಯರ ನಗ್ನತೆಯು,
ಭಾವದ ಭಗ್ನತೆಯು!
ಆಕಾಂಕ್ಷೆಗಳೋ? ಪಣ, ಆಕ್ರಮಣ;
ಸದೈವ ಚಿತ್ತಭ್ರಮಣ!
ಬಿಸಿಲುಗುದುರೆಸವಾರರ ಸಂತೆ
ನೆರೆಯಲೆಂದಿನಂತೆ!

ಪೆಟ್ರೋಲಿನದೇ ಪ್ರಸಾದತೀರ್ಥ;
ಕಲ್ಲಿದ್ದಲಿ ಲೋಬಾನ;
ಮಿಂಚಿನ ಪಂಚಾರತಿ; ಅಣುವಾಯುಧ;
ಗ್ರಾಮೋಫೋನಿನ ಗಾನ;

ವೈಜ್ಞಾನಿಕ ಸೂತ್ರಗಳೇ ಮಂತ್ರ;
ವ್ಯಾಪಕವಿದು ತಂತ್ರ,
ಇಂದಿನ ಯುಗಕೀ ಕಲಿಯೇ ಗುರುವು.
ಶುದ್ಧ ತಿರುವು–ಮುರುವು!

೬

ಅಲ್ಲ ಕಲಿಪುರುಷ ಬೂತುಗ–ಬೆಂತರವು;
ಕಲ್ಕಿಗೆ ರೂಪಾಂತರವು.
ದೀಪಮಾಲೆಗಳು ಹಸಿರು ಹೊಳೆಗಳಂತೆ
ಹರಿದು ಸೇರುತಗಲಿ,
ಮುಂಬಯಿ ನಗರವು ಮೆರೆದಿದೆ ಝುಗಝುಗಿಸಿ,–
ಆಗಿ ಜಗದ ಜಗಲಿ.

ಕಾಮನ ಬಿಲ್ಲಿನ ವಿವಿಧ ಕಮಾನುಗಳು,
ರೇಖಾಮಾಲೆಗಳು;
ಕೇಸರಿ ದೀಪಗಳಲ್ಪ ವಿರಾಮಗಳು;
ಮಾಣಿಕದೋಲೆಗಳು;
ಭೂಮಂಡಲವೇ ತಾರಾಮಂಡಲವು;
ಸುವರ್ಣ ಕುಂಡಲವು!

ಭೂಮಿಯೊಳಡಗಿದ ವ್ಯೋಮತತ್ವವನ್ನು,
ನಭದ ಸತ್ವವನ್ನು
ಕಲ್ಕಿಗಾಗಿ ಕಲಿ ಸ್ಫುರಿಸಿದ; ಧರಣಿಯೊಳು
ವ್ಯೋಮಗಂಗೆ ಹರಿದು;
ಯಂತ್ರಋಷಿಯ ಸಂಕಲ್ಪಕೆ ತಲೆಯೆತ್ತಿ
ನೂರು ನಗರ ಮೆರೆದು

ಛಿನ್ನ ವಿಚ್ಛಿನ್ನ ಧಾರುಣಿಯಹುದಿಂದು
ಒಂದೇ ಭೂಗೋಲ.
ಮಾನವ ಮನವೊಂದಾಗಲಿಹುದು; ಬಹುದು
ಹೊಂದಿಕೆಗಳ ಕಾಲ!
ನರನ ಕೊಂಕುಗಳು ರವಿಯ ಬೆಳಕಿಗೆಳೆದು

ಬಂದ ಕಲಿಯು ಬೆಳೆದು.
ರಭಸದಿ ನೆಗೆದಿದೆ ಹೊಸ ಹೊಂಚನು ಹಾಕಿ
ವಿಮಾನವಿದು ನೂಕಿ!
ವೈಮಾನಿಕ ಮಾನವನು ಗರುಡಪಕ್ಷಿ,
ನಭವನು ಸಂಚರಿಸಿ;
ಕಾಲ–ದೇಶಗಳ ವಿಸ್ತಾರವ ಜಯಿಸಿ,
ಸೌರಪಥವ ಬಯಸಿ!

ಗರಿಗೆದರುತ ಹೆಮ್ಮೀನಿದು ಹಾರಿಹುದು
ಇದುವೆ ಕಾಲಪಕ್ಷಿ :
ಭೂಮಿಯ ಬಿತ್ತರ ಕೆಳಗಡೆ ಹರವಿಹುದು,–
ನಾಳಿನದರ ನಕ್ಷಿ!
ವಿಮಾನವಿದರೊಳಗುಡ್ಡಾಣಿಸಿ–ನಾನು
ನವ ಮನುವಿನ ಸೂನು!

೧೦

ಹಿಂದೊಮ್ಮೆ ತಾಯ ಕಾಂತಿಯ ನಾನು ನೋಡಿದ್ದೆನು.
ಕಡಲಿನಾಳದಿ ತೇಲುತವಳೊಲವ ಹಾಡಿದ್ದೆನು.
ಇಂದಿಗೂ ನನ್ನ ತುಟಿ ಮರಳಿ ತೆರೆದಿಲ್ಲ.
ಇ–ಳಾ–ಗೀ–ತಗಳನು ಮೈಮರೆಯುತೊರೆದಿಲ್ಲ.
ಮತ್ತೆ ಕಂಡೆನಿದೀಗ ಕಣ್ತುಂಬ ಮಾತೆಯನ್ನು.
ನೋಡಿ ವಿಸ್ಮಯಯಗೊಂಡೆ ವಿಶ್ವವಿಖ್ಯಾತೆಯನ್ನು!

ಆರ್ಷ ಛಂದಸ್ಸಿನಾ ತಾಳಲಯದಲಿ ಕುಣಿದು
ಭಾಗವತ ಸಂಗೀತದಂತೆ ಮಣಿದು
ಉದಯಾಸ್ತಗಳ ಕ್ಷಿತಿಜದೋರೆಯಿಂದ
ದಕ್ಷಿಣೋತ್ತರ ದಿಶೆಯ ಮೇರೆಯಿಂದ
ಹೊರಹೊಮ್ಮುತಿಹುದೊಂದಪಾರ ಸೌಂದರ್ಯ,
ಬುಗ್ಗೆಯೊಲು ತಾಯ್ತನದ ಹೃದಯದೌದಾರ್ಯ!
ಅದನು ಕಾಣಲುಬೇಕು ದಿವ್ಯ ನೇತ್ರ,
ಅದರ ಹಾಡೂ ಹೌದು ದಿವ್ಯ ಸ್ತೋತ್ರ.

ನೋಡಿದೊ! ನಿರಾಳ ನಿರ್ವಯಲಿನಲಿ ತೆರೆದಿಹನು
ಪರಮೇಷ್ಠಿ ತಾ ತನ್ನ ವಜ್ರಮುಷ್ಟಿ!–
ಸಹಸ್ರಬಾಹುವಿನ, ಓ! ಸಾವಿರಂಗೈಗಳಿವು!
ನಿಟ್ಟಿಸವೆ ದೃಷ್ಟಾರರಮಿತ ದೃಷ್ಟಿ?
ಸಾವಿರದಲೊಂದು ಕರತಲವೆಮ್ಮ ಧರೆಯು.
ಆ ಅಮೃತಹಸ್ತದೊಂದೊಂದು ಗೆರೆಯು
ಅಹುದು ಮಸ್ತಕರೇಖೆ, ದೈವರೇಖೆ;
ಹೊಳೆವ ನದಿ–ನದಗಳಾಯುಷ್ಯ ರೇಖೆ;
ಗಣಿತವನೆ ಮೀರಿರುವ ಶಾಖೋಪಶಾಖೆ!
ತಿಳಿಯಯ್ಯ ಭಾಗವತ ಕರದ ಸಾಮುದ್ರಿಕವ.

ಮಂಗಳನ ಅಂಗಳವನಳೆದು ನಿಲ್ಲು.
ಶುಕ್ರಪರ್ವತ, ಚಂದ್ರಪರ್ವತಗಳನ್ನರಿದು
ಶಂಖ–ಚಕ್ರದ ಸಂಜ್ಞೆಗಳನು ಗೆಲ್ಲು.
ಕರತಲವ ಬಲ್ಲವಗೆ ಕರತಲಾಮಲಕ
ದೇವದೇವನ ರೂಹು; ಭೂಲೋಲಕ!

ವಜ್ರಮುಷ್ಟಿಯಲಿಹುದು ಮೂಲಬ್ರಹ್ಮದ ಗುಟ್ಟು;
ತೆರೆದಿರಲು,– ಪ್ರಾಣಮಯಗಳ ರಂಗಭೂಮಿ:
ಅಲ್ಲಿ ಬಿದ್ದೇಳುತ್ತ ತಿದ್ದಿಕೊಳುವರು ತಮ್ಮ,–
ನೀಚ, ಗರ್ವಿಷ್ಟ, ತಾಪಸ, ಕಾಮಿ, ಪ್ರೇಮಿ.

ವಾಸನೆಗಳಿಲ್ಲಿ ಮರುಳ್ಗುಣಿತವನು ಕುಣಿಕುಣಿದು
ಪೈಶಾಚಗಣಗಳಂತಲೆಯುತಿಹವು;
ಸಾತ್ತ್ವಿಕರ ಗುಣಭಾವಗಳು ಕುಸುಮದಂತರಳಿ
ಚೆಲುವಿತ್ತ ಗೆಲವಿಂದ ನಲಿಯುತಿಹವು.
ಇಲ್ಲಿ ರಾಗ, ವಿರಾಗ, ಇಂದ್ರಭೋಗವು, ಯೋಗ;
ಇಲ್ಲಿಯೇ ಸ್ವಾರ್ಥ, ಪರಮಾರ್ಥ, ಮುಗಿಯದ ತ್ಯಾಗ.
ಐದು ಬೆರಳುಗಳೈದು ದೈವತಗಳಿಲ್ಲಿ,–
ಆರ್ಪು, ನಲ್ಮೆಯು, ನೇರ್ಪು, ಬೆಳಕುಚೆಲ್ಲಿ
ಸತ್ಯ–ಸೌಂದರ್ಯಗಳ ಜೊತೆಗೆ, ನಾಳೆ
ಇವುಗಳನು ಬಾಳು ಪಡಿಮೂಡಿಸುವ ವೇಳೆ!
ಭವ್ಯತಮ ಕರತಲವಿದಾತ್ಮ ಶಿಲ್ಪದ ಶಾಲೆ.
ನವಸೃಷ್ಟಿ,– ಕರದೊಳಿಹ ಜೋಗ–ಮಾಲೆ!

ದೇವಮಾನವನು ರಾಕ್ಷಸಗಣವ ಶಿಕ್ಷಿಸಿದ
ನರಸಿಂಹನಾಗಿ ಮುಗ್ಧರನು ಗೆಲಿಸಿ:
ಆಗಿ ವಾಮನನು ಬಲಿಚಕ್ರವರ್ತಿಯ ತುಳಿದ,
ನರಕಕ್ಕೆ ಸ್ವರ್ಗದಾಸೆಯನು ಕಲಿಸಿ:

ತಾನಾಗಿ ಭಾರ್ಗವನು ಕಡಲ ಹಿಮ್ಮೆಟ್ಟಿಸುತ
ನಾಗರಿಕ ಸಂಸಾರಕಭಯವಿತ್ತ;
ದಾಶರಥಿಯಾಗುತ್ತ ನೀತಿಸ್ತಂಭವ ನೆಟ್ಟು
ರಾಮರಾಜ್ಯಕೆ ಬಾಳ ಮುಡಿಪನಿತ್ತ;

ಘನಮನದ ಪುರುಷೋತ್ತಮತೆಯ ಲೀಲೆಯ ತೋರಿ
ಶ್ರೀಕೃಷ್ಣನಾಗಿದ್ದ; ಬುದ್ಧನೆಂದು
ವ್ಯಕ್ತಿ ತನ್ನಯ ಬಾಳ ಶಿಲ್ಪಿಯೆಂತೆಂಬುದನು
ತೋರ್ದ, ನಿರ್ವಾಣವನು ಹೊಂದಿ ನಿಂದು;
ಕಲಿಯುಗದಿ ಕಲಕಿರಲು ಮನ, ಕಲ್ಕಿ ತೋರಿಹನು
ವಿಶ್ವವೊಂದೆ ಕುಟುಂಬವಿಹ ಧೋರಣ;
ವಿಶ್ವಮಾನವನೀಗ ಶ್ರೀಮನದುಪಾಸಕನು:
ಕೋದಿರುವ ನೂತನ ಯುಗದ ತೋರಣ!

ಬರಿ ಹೆಸರುಗಳ ಮಾಲೆಯನು ಹೆಣೆದರೇನು ಬಂತು?
ಮಾತು ಕೊನೆಮುಟ್ಟಿತೆಂತು?
ಅವತಾರಿಯೊ? ಆರೋಹಿಯೊ? ಏನದೇನೆ ಇರಲಿ;
ಬಾಜಿಸುತಿದೆ ಮುರಲಿ!
ಗಾನವೇಳುತಿದೆ ಸಂತತವಿಳೆಯ ಹೃದಯದಿಂದ:
"ನೋಡು ಬಾಳಿನಂದ!"
ಸದಾಸರ್ವಕಾಲ ಮೂಡಿ ಪ್ರವಾದಿಗಳ ಗುಂಪು
ಬಂತು ನಮ್ಮ ಧರೆಯ ಮಂಣಿಗೇನೆ ಹೊಸತು ಕಂಪು!

ಮುಸ್ಲೀಮು, ಪಾರಸೀಕ, ಬೌದ್ಧ, ಕ್ರೈಸ್ತ, ಹಿಂದು:
ಮತವಾವುದೊ? ಧರ್ಮವೇನೊ? ಒಳ್ತನವಹುದೊಂದು!
ಓಲಗವಿಳೆ, ರಂಗಸಾಲೆ, ಪ್ರಾರ್ಥನಾಮಂದಿರ,
ರಜತ–ಸ್ವರ್ಣ ದೀಪಗಳೊಲು ತೂಗಿ ಸೂರ್ಯಚಂದಿರ!
ಮಾನವ ದೊರೆ, ಪಾತ್ರ, ಗರ್ಭಗುಡಿಯೊಳಿರುವ ಮೂರ್ತಿ.
ವ್ಯಕ್ತಿ–ದೇವ: ದೇವ,–ವ್ಯಕ್ತಿ: ಇದೆ ಒಗಟದ ಪೂರ್ತಿ!
ಇಳೆಯ ದೇಗುಲಕೆ ಗುಮ್ಮಟದಂತಿದೆ ಗಗನಾಂಗಣ;
ನರನ ಬಾಳ ಸರಣಿ ಸುರರು ಹಾಕಿದಂಥ ರಿಂಗಣ:
ಇದೇ ಮಂಣಿನ ಮಾರ್ಪಾಟು–ಮಂಣಿನ ಕೈವಾಡ;
ಮಂಣೇ ತಾ ಮುಗಿಲಾಗುವ, ಮುಗಿಯದಿಹ ಪವಾಡ!
ಮಂಣೇ ಮೊಳಕೆಯಾಯ್ತು; ಸಸ್ಯವಾಗುತ ಕಂಣ್ದೆರೆಯಿತು;
ಪಾರಿಜಾತ, ಮಾಧವಿಲತೆಯಾಗುತ ಮೈಮರೆಯಿತು;
ಚಿಗರೆ–ಸಾರಂಗವಾಗಿ ಚಿನ್ನಾಟವಾಡಿತು;
ಗಾನತವಸಿ ಕೋಗಿಲವಿರೆ ಪಂಚಮದಲಿ ಹಾಡಿತು.
ಸಿಂಹವಾಗಿ ಗಿರಿ–ಗಂಹ್ವರಗಳಲಿ ಜಯವ ಸಾರಿತು;

ಗರುಡಪಕ್ಷಿಯಾಗಿ ವಿಯದ್ರಂಗಗಳನೆ ಮೀರಿತು!
ಪ್ರಾಣಪಲ್ಲವವು ಮನೋಮಯದಿ ಕುಸುಮವಾಯಿತು!
ವಿಜ್ಞಾನಮಯದಿ ಫಲೋನ್ಮುಖತೆಯ ಸಮವಾಯಿತು!
ಚಕ್ರವರ್ತಿಯಾಗುತಾಳಿ ಯೋಧನಾಗಿ ಕಾದಿತು;
ಕ್ರಾಂತದರ್ಶಿಯಾಗಿ ನವೋದಯದ ಕಹಳೆಯೂದಿತು.
ಮಂಣೇ **ಪ್ರೊಮಿಥಿಯಸ್**ನಾಗಿ, ಮಂಣೇ ಜಿನನಾಗಿ,
ದೇವಕುವರನಾಗಿ, ಸಕಲಸಾರ್ವಭೌಮನಾಗಿ,
ಜಯ ಜಯ ಮಂಗಳವೆಂದಿತು. ಮಂಣೆ ಮುಗಿಲುಗಂಣು;
ಸಪ್ತ ಲೋಕದಡಿಮುಡಿಯಿದು ಹಿಡಿದಿಹ ಹಿಡಿಮಂಣು!

೧೧

ಜಲರಾಶಿಯು ಹೊಯ್ದಾಡುತ
ಕ್ಷುಬ್ಧವಾಗುವಲ್ಲಿ
ಇದನು ಕಂಡು ನೀರೊಡೆದೆದೆ
ಸ್ತಬ್ಧವಾಗುವಲ್ಲಿ,
ವಾರಿಧಿಯ ಗಭೀರತೆಗಳ
ಕೆಣಕಿ ನೋಡುವಲ್ಲಿ,
ಲೀಲಾಲೋಲ ತರಂಗಗಳು
ನಿದ್ದೆ ಮಾಡುವಲ್ಲಿ:
ನೆಲವೇ ಆಧಾರಾ
ನೆಲವೇ ಆ–ಧಾರ!

ವಾಯುಸಮುದ್ರದಿ ವಿಹರಿಸಿ,
ಎಲರಲೆಯಲೆಗಳನು ಹರಸಿ
ಮೋಡದಾಚೆಗಿರುವ ನಾಡ
ನೋಡಿ ಹಾಡಿ ಬಂದರೂ
ಮುಗಿಲ ಪಾರಿಜಾತಗಳನು
ಸವಿನೆನಹಿಗೆ ತಂದರೂ
ಮರಳಿ ಬಂದೆನಿಳೆಯ ತೊಡೆಗೆ,
ಭೂಮಿತಾಯಿ ಕರೆಯುವೆಡೆಗೆ:
ನೆಲವೇ ಆಧಾರಾ
ನೆಲವೇ ಆ–ಧಾರ!

ಆತ್ಮ ಪಕ್ಷಿರೆಕ್ಕೆಯೆತ್ತಿ
ಸಪ್ತಲೋಕಗಳನು ಸುತ್ತಿ
ಅಕ್ಷರದಾ ಧ್ಯಾನದಲ್ಲಿ
ಬ್ರಹ್ಮದೇಕತಾನದಲ್ಲಿ

ಕಲ್ಪಾಂತದ ವರೆಗೆ ನಿಂದು
ಯುಗಯುಗಗಳ ಕಳೆದರೂ
ಕೋಟಿ ಸೂರ್ಯರಸಮಪ್ರಭೆಯೊ-
ಳದರ ಜ್ಯೋತಿ ಹೊಳೆದರೂ
ಮರಳಿ ಮತ್ತೆ ನಮ್ಮ ಧರೆಗೆ
ಓಗೊಡುವದು ಜಗದ ಕರೆಗೆ.
ಮರ್ತ್ಯದಲ್ಲಿ ನಿಂತು ಗೆಲ್ಲು
ಮರ್ತ್ಯವೆ ಒರೆಗಲ್ಲು;
ನೆಲವೇ ಆಧಾರಾ
ನೆಲವೇ ಆ-ಧಾರ!

ಅಭ್ಯಾಸಿಯ ಟಿಪ್ಪಣಿಗಳು

ನೀರದ

೧

ಮೋಡಗಳ ನಾಡಿನ ಪ್ರಥಮ ದರ್ಶನ ಇಲ್ಲಿದೆ. ಬಾಃಡಲೇನ ಈ ಸಾಲುಗಳನ್ನು ಇಲ್ಲಿ ನೆನೆಯಬಹುದು:

The richest cities and the scenes most proud
In nature, have no magic to enamour
Like those which hazard traces in the cloud
While wistful longing magnifies their glamour.

- The Voyage by Baudelaire
(Traslated by Roy Campbell)

೨

ನೀರದದಲ್ಲಿ ಅಡಗಿದ ನಾರದತತ್ವವೇ ಅದರ ವ್ಯಕ್ತಿತ್ವ, ಇದು ಮಾನವೀಯ ವ್ಯಕ್ತಿತ್ವದ ರೂಪಕವೂ ಆಗಿದೆ.

೩

ಮರ್ತ್ಯಲೋಕದ ಪ್ರತೀಕವಾದ ಮೋಡಗಳ ನಾಡಿದು. ಕಾಲಿದಾಸನ ಮೇಘಧೂತದಲ್ಲಿಯ ಈ ಚರಣವನ್ನು ಇಲ್ಲಿ ನೆನೆಯಬಹುದು: ಜಾನಾಮಿ ತ್ವಾಂ ಪ್ರಕೃತಿಪುರುಷಂ ಕಾಮರೂಪಂ ಮಘೋನಃ।

೪

ಚೈತ್ಯತತ್ವವು ಶುದ್ಧವಾಗಿದೆ. ದ್ವಂದ್ವಗಳೆಲ್ಲ ಅದನ್ನು ಆವರಿಸಿದ ಅವರಣಗಳಾಗಿವೆ. ಇದೇ ಅನಿಸಿಕೆ ಅಡಕವಾದ ಈ ಅವತರಣಿಕೆಗಳನ್ನು ಇಲ್ಲಿ ನೆನೆಯಬಹುದು.

ರತ್ನಚ್ಛಾಯಾವ್ಯತಿಕರ ಇವ ಪ್ರೇಕ್ಷ್ಯಮೇತತ್ ಪುರಸ್ತಾ-
ದ್ವಲ್ಮೀಕಾಗ್ರಾತ್ ಪ್ರಭವತಿ ಧನುಃಖಂಡಮಾಖಂಡಲಸ್ಯ-
ಏನ ಶ್ಯಾಮಂ ವಪುರತಿತರಾಂ ಕಾಂತಿಮಾಪತ್ಸ್ಯತೇ ತೇ
ಬರ್ಹೇಣೈವ ಸ್ಫುರಿತರುಚಿನಾ ಗೋಪವೇಷಸ್ಯ ವಿಷ್ಣೋಃ ॥

- ಕಾಲಿದಾಸನ ಮೇಘದೂತ : ೧೫

Life and all that lives, is conceived in the mist and not in the crystal. And who knows but a crystal is mist in decay?

- The Prophet by Kahlil Gibran

೫

ಶುದ್ಧ ಚೈತ್ಯ ತತ್ವದ ಕಡೆಗೆ ತಿರುಗಿದ ಯಾತ್ರೆಯನ್ನು ಟಿ.ಎಸ್. ಇಲ್ಯಟ್ ತನ್ನ ರೀತಿಯಲ್ಲಿ ಹೀಗೆ ವರ್ಣಿಸಿದ್ದಾನೆ :

The inner freedom from the practical desire,
The release from action and suffering, release from
the inner
And the outer compulsion, yet surrounded
By a grace of sense, a white light still and moving...

- Burnt Norton by T.S. Eliot

೬

ಶುದ್ಧ ಚೈತ್ಯ ತತ್ವವನ್ನು ಹೊಂದಿ ನಿಂತಾಗ,- ಪ್ರಪಂಚ ವಿವಿಧತೆಯ ಅನುಭವದ ಆನಂದ ಅದಕ್ಕಿಲ್ಲವೆಂದು ಕಂಡುಬರುತ್ತದೆ. ಪ್ರಪಂಚದ ವೈಪರೀತ್ಯಗಳನ್ನು ನಿರ್ಮೂಲಗೊಳಿಸುವುದು ಅದಕ್ಕೆ ಸಾಧ್ಯವಾಗುವುದಿಲ್ಲ. ಈ ಸಂದರ್ಭದಲ್ಲಿ ಕೆಳಗಿನ ಅವತರಣಿಕೆಗಳನ್ನು ಹೋಲಿಸಬಹುದು.

Only is calm so sweet? Is our close tranquillity only?
Cold are the rivers of peace and their banks are
leafless and lonely,
Heavy is godhead to bear with its mighty sun-burden
of Lustre.

- Ahana by Sri Aurobindo

O cease! must hate and death return?
Cease! must men kill and die?
Cease! drain not to its dregs the urn
Of bitter prophecy.
The world is weary of the past,
O might it die or rest at east!

- Hellas by Shelley

೭

ಆದರೆ ದೇವಕರುಣೆಯಿಂದ ಹಾಗೂ ಚೈತ್ಯಪುರುಷನ ಧೀರೋದಾತ್ತ ಸಂಕಲ್ಪದಿಂದ ಇಂತಹ ಮಾರ್ಪಾಟು ಸಾಧ್ಯ. ಇಂದ್ರನು ಇಂತಹ ಕರುಣೆ, ಸಂಕಲ್ಪಗಳ ಪ್ರತೀಕವಾಗಿದ್ದಾನೆ. ದುಷ್ಪ್ರವೃತ್ತಿಯ ಸಂಹಾರವಾಗಿ ನವನೀರದವೊಂದು ನವಮಾನವನ ಪ್ರತೀಕವಾಗುತ್ತದೆ. ಈ ಅವತರಣಿಕೆಗಳನ್ನು ಇಲ್ಲಿ ನೆನೆಯಬಹುದು:

Thus shall the earth open divinity
And common natures feel the wide uplift,
Illumine common acts with the spirit's ray
And meet the deity in common things.
Nature shall live to manifest Secret God,
The spirit shall take up the human play,
This earthly life become the life divine.

- Savitri : XI, by Sri Aurobindo

Rose of God, smitten purple with the incarnate divine
Desire,
Rose of life, crowded with petals, colour's lyre!
Transform the body of the mortal like a sweet and
magical rhyme;
Bridge our earthhood and heavenhood. make
deathless the children of Time.

- Rose of God by Sri Aurobindo

೮

ಪ್ರತೀಕಪ್ರಧಾನವಾದ ಕವನ ಇಲ್ಲಿ ಕಥನಾತ್ಮಕವಾಗುತ್ತದೆ. ಹುಟ್ಟಿಬಂದ ನವನೀರದದ ಕಥೆ ಇಲ್ಲಿ ಇಕ್ಷು ಎಂಬ ಕಥಾನಾಯಕನ ಮುಖಾಂತರ ಮುಂದುವರಿದಿದೆ. 'ಇಕ್ಷು'ವಿನ ಕಥೆಯ ಉಗಮ ಇಕ್ಸಾಯನ್‌ನ ಕತೆಯಲ್ಲಿದೆ. ಅದರ ಮಾರ್ಪಾಟುಗಳು ಕವಿಯವು. ಪರಾ–ಪ್ರಕೃತಿಯ ರೂಪವನ್ನು ಗ್ರಹಿಸಬಲ್ಲ ಶಕ್ತಿ ಇಕ್ಷುವಿನ ಕಣ್ಣಿಗಿಲ್ಲ. ಅದರಿಂದ ವಿಕೃತಿ ಏಳುತ್ತದೆ. ಕೆಳಗಿನ ಅವತರಣಿಕೆಗಳನ್ನು ಇಲ್ಲಿ ನೆನೆಯಬಹುದು:

I. "The **Epipsychidion** I cannot look at; the person whom it celebrates was a cloud intead of a Juno; and poor Ixion starts from the Centaur that was the offspring of his own embrace."

- Shelley's letter to Leigh Hunt
dated 18th June, 1822

II. For she was beautiful-her beauty made
The bright world dim, and every thing beside
Seemed like the fleeting image of a shade.

- The Witch of Atlas by P.B. Shelley

III. A Power Came into veil the eternal Light,
A power opposed to the eternal will
Diverts the messages of the infallible Word,
Contorts the contours of the cosmic plan....
This all must conquer who would bring down God's peace
This hidden foe lodged in the human breast
Man must overcome or miss his higher fate.
This is the inner war without escape.

- Savitri: VI, ii by Sri Aurobindo

೯

ಪಶ್ಚಾತ್ತಾಪಪುನೀತನಾದ ಇಕ್ಷುವಿಗೆ ಇಂದ್ರನು ವಿರಾಟದರ್ಶನವನ್ನು ಮಾಡಿಸುತ್ತಾನೆ. ಅರ್ಜುನನಿಗೆ ಕುರುಕ್ಷೇತ್ರದಲ್ಲಿ **ಕಾಲದ** ಅನಂತತೆಯ ದರ್ಶನವಾದರೆ ಇಲ್ಲಿ ಇಕ್ಷುವಿಗೆ

ಸ್ಥಾನದ (Space) ಅನಂತತೆಯ ದರ್ಶನ ಆಗುತ್ತದೆ. ಮೂರ್ಧ್ನ ನೇತ್ರದ ಕಾಣ್ಕೆ ವಿಶ್ವದಲ್ಲಿ ನೆಲೆಗೊಂಡಾಗ ಮಾತ್ರ ಸ್ವರ್ಣಯುಗ ಇಲ್ಲಿ ಶಾಶ್ವತವಾಗಿ ನೆಲೆಸಬಹುದು. ಕೆಳಗಿನ ಅವತರಣಿಕೆಗಳನ್ನು ಇದರೊಡನೆ ಹೋಲಿಸಬಹುದು:

Our human eyes see very little
The stars and the planets
Worlds beyond worlds
Universe without end.

- Moon's Farm by Herbert Read

To apprehend
The point of intersection of the timeless
With time, is an occupation for the saint.

- The Dry Salvages by T.S. Eliot

೧೦

ಕಥನ ಮತ್ತೆ ಪ್ರತೀಕಕ್ಕೆ ಹೊರಳುತ್ತದೆ. ಚೈತ್ಯ ದೃಷ್ಟಿಯ ಶುದ್ಧಿಯನ್ನು ಪಡೆದ ನವನೀರದ ಘನದ ಪ್ರಜ್ಞೆಯನ್ನೂ ಪಡೆದು ಪ್ರಪಂಚದ ಪೂರ್ಣ ವಿಕಾಸಕ್ಕಾಗಿ ಕ್ರಿಯಾಪರವಾಗುವ ಬಗ್ಗೆ ಇಲ್ಲಿ ಧ್ವನಿತವಾಗಿದೆ. ಈ ಅವತರಣಿಕೆಗಳನ್ನು ಇಲ್ಲಿ ನೆನೆಯಬಹುದು:

I. The dance along the artery
The circulation of the lymph
Are figured in the drift of stars
Ascend to summer in the tree...

- Burnt Norton by T.S. Eliot

II. He plunged his roots into the Infinte,
He based his life upon Eternity

- Savitri: I, iii by Sri Aurobindo

ಇಳಾಗೀತ

ಕವಿಯಿಂದ ತಿಳಿದಂತೆ ಇಲ್ಲಿ ಬಳಸಿದ ಭೌಗೋಲಿಕ ದೃಶ್ಯಗಳ ಪ್ರತಿಮೆಗಳು ಬೆಳಗಾವಿಯಿಂದ ದಿಲ್ಲಿಯ ವರೆಗಿನ ವಿಮಾನಯಾನದಿಂದ ಸೂಚಿತವಾದವುಗಳು. ಪ್ರತೀಕಪ್ರಧಾನವಾದ ಇಲ್ಲಿಯ ಕಾವ್ಯವಸ್ತುವಿಗೆ ಪೋಷಕವಾಗುವಂತೆ ಅವುಗಳನ್ನು ಆಯ್ದುಕೊಂಡು ಯೋಜಿಸಲಾಗಿದೆ.

೧

ಪೃಥ್ವಿಯೇ ಒಂದು ದೇವನಿರ್ಮಿತ, ಕಾವ್ಯಮಯ ಕಲಾಕೃತಿಯೆಂದು ಇಲ್ಲಿ ಬಣ್ಣಿಸಲಾಗಿದೆ. "The poetry of earth is never dead" ಎಂಬ ಕೀಟ್ಸ್ ಕವಿಯ ಉಕ್ತಿಯನ್ನು ಇಲ್ಲಿ ನೆನೆಯಬಹುದು.

೨

ಇದು ವಿಮಾನಯಾನದ ವರ್ಣನೆ. ಬೇರೆ ಲೋಕವನ್ನು ಪ್ರವೇಶಿಸಿ ನೋಡಿದಾಗ ಭೂಲೋಕದ ಸಮಗ್ರ ದೃಷ್ಟಿ ಸಾಧ್ಯವಾಗುತ್ತದೆ. ವಿಮಾನಯಾನದಿಂದ ಬರಿ ಕಲ್ಪಕತೆಯ ದ್ವಾರದಿಂದಲ್ಲ, ದೈಹಿಕವಾಗಿ ಸಹ ಇಂತಹ ದೃಷ್ಟಿ ಸಾಧ್ಯವಾಗುತ್ತದೆ. ಇನ್ನೊಂದು ಸ್ತರದಿಂದ ಪಡೆದ ಪೃಥ್ವಿಯ ಪ್ರಥಮ ಅಸ್ಪಷ್ಟ ದರ್ಶನ ಇಲ್ಲಿ ಮೂಡಿದೆ.

೩

ಪೃಥ್ವಿಯು ಹುಟ್ಟಿ ಬಂದಮೇಲೆ–ಜೀವಜಾತಕ್ಕೆ ಅದು ವಸತಿಸ್ಥಾನವಾದ ಮೇಲೆ ಅದು ಗೋಚರವಾಗುವ ಬಗೆಯನ್ನು ಇಲ್ಲಿ ಬಣ್ಣಿಸಲಾಗಿದೆ. ಈ ಕಾಲವನ್ನು ಮತ್ಸ್ಯ–ಕೂರ್ಮ–ವರಾಹಾವತಾರಗಳ ಕಾಲಕ್ಕೆ ಹೋಲಿಸಿದೆ.

೪

ಇಳೆಯು ರೂಪಗೊಳ್ಳಲು ವರುಣನು ಹೂಡಿದ ಸಾಹಸಗಳನ್ನು ಇಲ್ಲಿ ವಿಹಂಗಮದೃಷ್ಟಿಯಿಂದ ಅವಲೋಕಿಸಲಾಗಿದೆ.

೫

ವರುಣನಾದ ಮೇಲೆ ಮರುತನ ಕಾರ್ಯ. ಇಳೆಯ ರೂಪಣದಲ್ಲಿ ಮರುತ ರೆಂತು ನೆರವಾದರು? ಅದರ ಸೂಚನೆ ಇಲ್ಲಿದೆ. "Destroyer and Preserver"ಎಂದು ತನ್ನ ಒಂದು ಓಡಿನಲ್ಲಿ ಶೆಲ್ಲಿ ಕವಿ ಮರುತನನ್ನು ವರ್ಣಿಸಿದ್ದಾನೆ. ಇಲ್ಲಿ ಮರುತನ ನಿರ್ಮಾಣ ಕಾರ್ಯದ ವಿವರಣೆ ಇದೆ.

೬

ವಿಮಾನದೃಷ್ಟಿಗೆ ಮಾನವನು ಕಾಣುವುದೇ ಇಲ್ಲ. ಮನುಕುಲ ಹುಟ್ಟುವುದಕ್ಕಿಂತ ಮುಂಚಿನ ಇಳೆಯ ವಿಕಾಸವನ್ನು ಇಲ್ಲಿಯವರೆಗೆ ಬಣ್ಣಿಸಲಾಗಿದೆ. ಮಾನವನು ಹುಟ್ಟಿ ಬಂದಮೇಲೆ ಧರಾಂಗನೆಗೆ ರಕ್ತಸ್ನಾನವಾಯಿತೇ ಹೊರತು ಮತ್ತೇನೂ ಆಗಲಿಲ್ಲ. ಈ ಎಸಳಿನಲ್ಲಿ ವಿಡಂಬನೆಗೆ ಅವಕಾಶ ದೊರೆತಿದೆ.

೭

ಆದರೆ ಮಾನವನ ಪ್ರಾದುರ್ಭಾವ ಇಳೆಗೆ ಬರಿ ಅಮಂಗಲಕರವಾಗಿಲ್ಲ. ಅವನಿಂದ ಇಳೆಯ ರೂಪ–ಸ್ಥಿತಿಗಳಲ್ಲಾದ ಪರಿವರ್ತನೆಗಳನ್ನು ಮುಂದಿನ ಅವತಾರಗಳ ಪ್ರತೀಕಮಯತೆಯ ಮೂಲಕ ಇಲ್ಲಿ ಸೂಚಿಸಲಾಗಿದೆ.

೮

ಆದರೆ ಔದ್ಯೋಗಿಕ ಯುಗದ ಪ್ರಾರಂಭದಿಂದ ಇಳೆಯ ಸ್ಥಿತಿ ಮತ್ತೆ ವಿಷಮವಾಗಿದೆ. ಮುಂಬಾಪುರಿಯ ವರ್ಣನೆಯ ಮೂಲಕ ಇದನ್ನು ತಿಳಿಯಪಡಿಸಿದೆ. ಕಲಿಯುಗವೆಂಬುದರ ಅರ್ಥವೇ ಇದೆಂದು ಸೂಚಿಸಲಾಗಿದೆ.

೯

ಆದರೆ ಕಲಿಪ್ರವೇಶ ಕೊನೆಯ ಮಾತಲ್ಲ. ಕಲ್ಕಿ ಅವತಾರದ ಹೊಂಚು ಸಹ ಕಾಣಿಸತೊಡಗಿದೆ. ಔದ್ಯೋಗೀಕರಣ ಒಂದು ದೃಷ್ಟಿಯಿಂದ ವಿಷಮವಾದರೂ ವಿಜ್ಞಾನಯುಗದ ಮೂಲಕ ಜಾಗತಿಕ ಐಕ್ಯವೂ ಸಮೀಪವೆಂದು ಎನಿಸಹತ್ತಿದೆ. ವಿಜ್ಞಾನದ ಸೃಷ್ಟಿಯಲ್ಲಿಯೂ ಒಂದು ಸೌಂದರ್ಯವಿದೆ.

೧೦

ಹೀಗೆ ಯುಗಯುಗಗಳಲ್ಲಿ ವಿಕಸಿತವಾಗುತ್ತ ಬಂದ ಇಳೆಯ ಭವಿಷ್ಯವೇನು? ಧ್ವನಿ–ಫಲಶ್ರುತಿಗಳೇನು? ವಿರಾಟಪುರುಷನ ಪ್ರತಿಮೆ ಇಲ್ಲಿ ಕವಿಯ ದರ್ಶನದಲ್ಲಿ ಕೇಂದ್ರಸ್ಥಾನವನ್ನು ಪಡೆಯುತ್ತದೆ. ಇಳೆಯ ಭವಿಷ್ಯದ ಗೀತ ಇಲ್ಲಿಯೇ ನೈಜವಾಗಿ ಹೊರಹೊಮ್ಮಿದೆ. ಇಳೆಯ ದೈವಿಕತೆ ಇಲ್ಲಿಯೇ ವ್ಯಕ್ತವಾಗಿದೆ.

೧೧

ಮಾನವನ ಆತ್ಮವಿಕಾಸದಲ್ಲಿ ಹಾಗೂ ದೈವ ಶಕ್ತಿಯ ಲೀಲಾಕ್ರಮದಲ್ಲಿ ನೆಲಕ್ಕಿರುವ ಸ್ಥಾನ ಇಲ್ಲಿ ಸೂಚಿತವಾಗಿದೆ.

■

ಶತಮಾನೋತ್ಸವ ವರ್ಷ : ೨೦೧೪-೨೦೧೫

ಕನ್ನಡ ಸಾಹಿತ್ಯ ಪರಿಷತ್ತಿನ ನೂರರ ಸಂಭ್ರಮಕ್ಕೆ ಕಿರೀಟಪ್ರಾಯವಾದ ಯೋಜನೆ ಕನ್ನಡದ ನೂರು ಮೌಲಿಕ ಗ್ರಂಥಗಳ ಮರುಮುದ್ರಣ. ಈ ಪುಸ್ತಕಗಳ ಆಯ್ಕೆಯಲ್ಲಿ ಕನ್ನಡ ಸಾಹಿತ್ಯದ ವಿವಿಧ ಘಟ್ಟಗಳು, ಚಳುವಳಿಗಳು ಹಾಗೂ ವಿವಿಧ ಸಾಹಿತ್ಯಿಕ ಸಂವೇದನೆಗಳನ್ನು ಗಮನದಲ್ಲಿರಿಸಿಕೊಳ್ಳಲಾಗಿದೆ. ಸಾಹಿತ್ಯದ ಎಲ್ಲ ಪ್ರಕಾರಗಳಿಗೂ ಪ್ರಾತಿನಿಧ್ಯವಿರುವಂತೆ ಸಹ ನೋಡಿಕೊಳ್ಳಲಾಗಿದೆ. ಪ್ರತಿಭೆ, ಪ್ರಾದೇಶಿಕತೆ ಹಾಗೂ ಸಾಮಾಜಿಕ ನ್ಯಾಯಗಳನ್ನು ಪರಿಗಣಿಸಲಾಗಿದೆ. ಈ ಅಮೂಲ್ಯ ಕನ್ನಡ ಕೃತಿಗಳನ್ನು ಓದುಗರು ಪ್ರೀತಿ ಅಭಿಮಾನಗಳಿಂದ ಬರಮಾಡಿಕೊಳ್ಳುವರೆಂದು ನಂಬಿದ್ದೇನೆ.

ಪುಂಡಲೀಕ ಹಾಲಂಬಿ
ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್ತು

ಕನ್ನಡ ಸಾಹಿತ್ಯ ಪರಿಷತ್ತು
ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು-೫೬೦೦೧೮